# ಹಂಪಿ ಟೈಮ್ಸ್

HAMPI TIMES

ಕನ್ನಡ ದಿನಪತ್ರಿಕೆ
KANNADA DAILY

ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA

ಸಂಪುಟ:01 Volume:01 • ಸಂಚಿಕೆ:207 Issue:207 • ನೋಂದಣಿ ನಂ.:KARKAN27911 Reg.No:KARKAN27911 • ವಿಜಯನಗರ VIJAYANAGARA • 11.01.2024 • ಗುರುವಾರ Thursday • ಪುಟ:04 Page:04 • ಬೆಲೆ:2 Rs:2



Spend LESS and get MORE publicity
BENEFITS OF ADVERTISING
in Local Leading HAMPI TIMES Newspaper
1. Flexibility
2. Timeliness
3. Affordability
4. Engaged audience
5. Positive response
6. Targeted demographic
7. Trustworthy medium
8. Design options
CALL US : 9448633038
Email us Your Advertisement Content to : hampitimes@gmail.com



ವಿಜಯನಗರ ಮತ್ತು ಬಳ್ಳಾರಿ ಜಿಲ್ಲೆಯ ಸಮಸ್ತ ರೈತರಿಗೆ ದಸರ ಹಾಗೂ ದೀಪಾವಳಿ ಹಬ್ಬಕ್ಕೆ ಸಹಕಾರ ನಿಡಿದ್ದಕ್ಕಾಗಿ ತುಂಬು ಹೃದಯದ ಧನ್ಯವಾದಗಳು

ವಿಜಯಶ್ರೀ ಮೋಟಾರ್ಸ್ ಟ್ರ್ಯಾಕ್ಟರ್ ವಿಭಾಗ

MASSEY FERGUSON TAFE

28 HP ಟ್ರ್ಯಾಕ್ಟರ್ ಡೌನ್ ಪೇಮೆಂಟ್ ಕೇವಲ ₹280/- MF 6028

42 HP ಟ್ರ್ಯಾಕ್ಟರ್ ಡೌನ್ ಪೇಮೆಂಟ್ ಕೇವಲ ₹499/- MF 241

45 HP ಟ್ರ್ಯಾಕ್ಟರ್ ಡೌನ್ ಪೇಮೆಂಟ್ ಕೇವಲ ₹501/- MF 245

*ಟಿ.ಪಿ., ಇನ್ಸುರೆನ್ಸ್, ರಿಜಿಸ್ಟ್ರೇಶನ್ ಉಚಿತ

ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿರಿ :
ವಿಜಯಶ್ರೀ ಮೋಟಾರ್ಸ್ ಟ್ರ್ಯಾಕ್ಟರ್ ವಿಭಾಗ
ಕೊಂಡನಾಯಕನಹಳ್ಳಿ, ಹಂಪಿ ರಸ್ತೆ, ಹೊಸಪೇಟೆ-583239.
ಮೊ : 9980127607, 7353306719
*ಷರತ್ತುಗಳು ಅನ್ವಯಿಸುತ್ತವೆ

ರೈತರ ಕೋರಿಕೆಯ ಮೇರೆಗೆ ಈ ಸ್ಕೀಂ ಇನ್ನೂ 25 ಗ್ರಾಹಕರಿಗೆ ಮಾತ್ರ ವಿಸ್ತರಿಸಲಾಗುವುದು (ಮೊದಲು ಬಂದವರಿಗೆ ಆದ್ಯತೆ)



ಹಂಪಿ ಟೈಮ್ಸ್ e-paper
ವಿಜಯನಗರದ ಹೆಮ್ಮೆ
REACH EVERY WHERE NO BORDER
ADS
9448633038
www.hampitimes.com


# ನಾಡಿನ ದಿಗ್ಗಜರಿಗೆ ನಾಡೋಜ ಪದವಿ ಪ್ರದಾನ

## ಕನ್ನಡ ವಿವಿ 32ನೇ ನುಡಿಹಬ್ಬದಲ್ಲಿ ಸಾಧಕರಾದ ಡಾ.ಬಸವಲಿಂಗ ಪಟ್ಟದ್ದೇವರು, ಪ್ರೊ.ತೇಜಸ್ವಿ ಕಟ್ಟಿಮನಿ, ಪ್ರೊ. ಎಸ್.ಸಿ.ಶರ್ಮಾ ಅವರಿಗೆ ನಾಡೋಜ

### ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋಟ್ ಅನುಪಸ್ಥಿತಿ | ವಿಮಾನ ತಾಂತ್ರಿಕ ದೋಷದಿಂದ ತಡವಾಗಿ ಆಗಮಿಸಿದ ಉನ್ನತ ಶಿಕ್ಷಣ ಸಚಿವರು

■ **ಹಂಪಿ ಟೈಮ್ಸ್ ಹೊಸಪೇಟೆ**

ಹಂಪಿ ಕನ್ನಡ ವಿಶ್ವವಿದ್ಯಾಲಯದ 32ನೇ ನುಡಿಹಬ್ಬ ಘಟಿಕೋತ್ಸವದ ಪ್ರಯುಕ್ತ ರಾಜ್ಯದ ಮೂವರು ಗಣ್ಯರಿಗೆ ನಾಡೋಜ ಗೌರವ ಪದವಿ ಮಾಡಲಾಯಿತು. ಬಸವ ತತ್ವವನ್ನೇ ಬದುಕಿನ ಆದರ್ಶವನ್ನಾಗಿ ಮಾಡಿಕೊಂಡಿದ್ದ ಪೂಜ್ಯ ಲಿಂಗೈಕ್ಯ ಡಾ. ಚನ್ನಬಸವ ಪಟ್ಟದ್ದೇವರ ಬಸವಸಂಸ್ಕೃತಿ ಪರಂಪರೆಯನ್ನು ಮುಂದುವರಿಸಿಕೊಂಡು ಹೊರಟಿರುವ ಭಾಲ್ಕಿ ಹಿರೇಮಠದ ಡಾ.ಬಸವಲಿಂಗ ಪಟ್ಟದೇವರು, ಬಹುಭಾಷಾ ಪಂಡಿತರಾಗಿ ಸಮರ್ಥ ಅನುವಾದಕರೆಂದು ಖ್ಯಾತಿ ಪಡೆದ ಮೂಲತಃ ನಮ್ಮ ರಾಜ್ಯದ ಪ್ರಾಧ್ಯಾಪಕರು ಹಾಗೂ ಪ್ರಸ್ತುತ ಆಂದ್ರಪ್ರದೇಶದ ಸರ್ಕಾರಿ ಬುಡಕಟ್ಟು ವಿಶ್ವವಿದ್ಯಾಲಯದ ಕುಲಪತಿಗಳಾದ ಡಾ.ತೇಜಸ್ವಿ ವಿ ಕಟ್ಟಿಮನಿ, ತುಮಕೂರು ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿಗಳಾದ ಬೆಂಗಳೂರಿನ ಡಾ ಎಸ್.ಸಿ.ಶರ್ಮಾ ಅವರಿಗೆ ನಾಡೋಜ ಗೌರವ ಪ್ರದಾನ ಮಾಡಲಾಯಿತು. ಜನವರಿ 10ರಂದು ವಿದ್ಯಾರಣ್ಯದ 'ನವರಂಗ' ಬಯಲು ರಂಗಮಂದಿರದಲ್ಲಿ ನಡೆದ ಹಂಪಿ ಕನ್ನಡ ವಿಶ್ವವಿದ್ಯಾಲಯದ 32ನೇ ನುಡಿಹಬ್ಬ ಘಟಿಕೋತ್ಸವ ಸಮಾರಂಭದಲ್ಲಿ ಉನ್ನತ ಶಿಕ್ಷಣ ಸಚಿವರು ಮತ್ತು ಹಂಪಿ ಕನ್ನಡ ವಿಶ್ವವಿದ್ಯಾಲಯದ ಸಮಕುಲಾಧಿಪತಿಗಳಾದ ಡಾ. ಎಂ.ಸಿ ಸುಧಾಕರ್ ಅವರು ನಾಡೋಜ ಗೌರವ ಪದವಿ ಪ್ರದಾನ ಮಾಡಿದರು. ಹಂಪಿ ಕನ್ನಡ ವಿಶ್ವವಿದ್ಯಾಲಯವು ರಾಷ್ಟ್ರ ಕವಿ ಕುವೆಂಪು, ಸಿದ್ದವನಹಳ್ಳಿ ನಿಜಲಿಂಗಪ್ಪ, ಗಂಗೂಬಾಯಿ ಹಾನಗಲ್, ಡಾ. ಪಾಟೀಲ ಪುಟ್ಟಪ್ಪ ಸೇರಿದಂತೆ ಇಲ್ಲಿಯವರೆಗೆ 95 ಗಣ್ಯರಿಗೆ ನಾಡೋಜ ಗೌರವ ಪದವಿ ನೀಡಲಾಗಿದೆ. ಪ್ರೊ.ಎಫ್.ಟಿ.ಹಳ್ಳಿಕೇರಿ, ಡಾ.ಚೆಲುವರಾಜು, ಡಾ.ಶಿವಾನಂದ ವಿರಕ್ತಮಠ ಅವರು ನಾಡೋಜ ಪುರಸ್ಕೃತ ಮಹನಿಯರ ಪರಿಚಯ ಮಾಡಿದರು.

ಡಾ.ಬಸವಲಿಂಗ ಪಟ್ಟದೇವರು: ಕಲ್ಯಾಣ-ಕರ್ನಾಟಕ ಭಾಗವಾದ ಬೀದರಿನ ಭಾಲ್ಕಿ ಹಿರೇಮಠ ಸಂಸ್ಥಾನದ ಪರಮಪೂಜ್ಯರಾದ ಡಾ. ಬಸವಲಿಂಗ ಪಟ್ಟದ್ದೇವರು 25.08.1950 ರಲ್ಲಿ ಜನಿಸಿದರು. ಬಸವತತ್ವವನ್ನೇ ಬದುಕಿನ ಆದರ್ಶವನ್ನಾಗಿ ಮಾಡಿಕೊಂಡಿದ್ದ ಪೂಜ್ಯ ಲಿಂಗೈಕ್ಯ ಡಾ. ಚನ್ನಬಸವ ಪಟ್ಟದ್ದೇವರ ಬಸವಸಂಸ್ಕೃತಿ ಪರಂಪರೆಯನ್ನು ಮುಂದುವರಿಸಿಕೊಂಡು ಬಂದವರು. ಗಡಿಭಾಗವಾದ ಬೀದರ್ ಪರಿಸರದಲ್ಲಿ ಕನ್ನಡ-ಕನ್ನಡಿಗ-ಕರ್ನಾಟಕ ಪ್ರಜ್ಞೆಯನ್ನು ಗಟ್ಟಿಯಾಗಿ ನೆಲೆಯೂರುವಂತೆ ಮಾಡಿದರು. ಡಾ. ಬಸವಲಿಂಗ ಪಟ್ಟದ್ದೇವರು ಬಹುಭಾಷಿಕ ವಿದ್ವಾಂಸರು. ಶರಣ ಸಾಹಿತ್ಯ ಕುರಿತು 30ಕ್ಕೂ ಹೆಚ್ಚು ಕೃತಿಗಳನ್ನು ಬರೆದಿದ್ದಾರೆ. ಇವರ ಕೃತಿಗಳು ಮರಾಠಿ, ತೆಲುಗು ಭಾಷೆಗೆ ಅನುವಾದಗೊಂಡು ಜನಪ್ರಿಯತೆ ಪಡೆದಿವೆ. ಪೂಜ್ಯರಿಗೆ ಬಸವತತ್ವ ಪ್ರಸಾರವೇ ಪ್ರಾಣಜೀವಾಳವಾಗಿದೆ. ಆದಕಾರಣ ಪೂಜ್ಯರು ರಾಜ್ಯ-ಹೊರರಾಜ್ಯಗಳಲ್ಲಿ ಮಹಾರಾಷ್ಟ್ರ ಬಸವ ಪರಿಷತ್ತು, ತೆಲಂಗಾಣ ಬಸವ ಪರಿಷತ್ತು, ಅನುಭವ ಮಂಟಪ ಸಂಸ್ಕೃತಿ ವಿದ್ಯಾಲಯ ಸ್ಥಾಪಿಸಿ ಬಸವತತ್ವದ ಪ್ರಸ್ತುತೆಯನ್ನು ನಾಡಿನಾದ್ಯಂತ ಪ್ರಸಾರಿಸುವ ಕಾಯಕದಲ್ಲಿ ನಿರತರಾಗಿದ್ದಾರೆ. ಪರಮಪೂಜ್ಯ ಡಾ. ಬಸವಲಿಂಗ ಪಟ್ಟದ್ದೇವರ ಶೈಕ್ಷಣಿಕ, ಧಾರ್ಮಿಕ ಹಾಗೂ ಸಾಮಾಜಿಕ ಸಾಧನೆಗಳನ್ನು ಪುರಸ್ಕರಿಸಿ ಕನ್ನಡ ವಿಶ್ವವಿದ್ಯಾಲಯವು 32ನೇ ನುಡಿಹಬ್ಬದಲ್ಲಿ ಪ್ರತಿಣಷ್ಠಿತ 'ನಾಡೋಜ' ಗೌರವ ಪದವಿಯನ್ನು ನೀಡಿ ಗೌರವಿಸಿದೆ.

ಡಾ.ತೇಜಸ್ವಿ ವಿ ಕಟ್ಟಿಮನಿ: ಡಾ ತೇಜಸ್ವಿ ವೆಂಕಪ್ಪ ಕಟ್ಟಿಮನಿ ಅವರು 14 ಜೂನ್ 1955ರಲ್ಲಿ ಕೊಪ್ಪಳ ಜಿಲ್ಲೆ ಅಳವಂಡಿಯಲ್ಲಿ ಜನಿಸಿದರು. ಕರ್ನಾಟಕ ವಿಶ್ವವಿದ್ಯಾಲಯದಿಂದ ಹಿಂದಿ ವಿಷಯದಲ್ಲಿ ಎಂ.ಎ.ಪಿಎಚ್ ಡಿ ಪದವಿಯನ್ನು ಪಡೆದಿದ್ದಾರೆ. 44 ವರ್ಷಗಳ ಕಾಲ ಶಿಕ್ಷಣ ಕ್ಷೇತ್ರದಲ್ಲಿ ದುಡಿದಿರುವ ಪ್ರೊ. ಟಿ.ವಿ. ಕಟ್ಟಿಮನಿಯವರು 2014 ರಿಂದ 2019 ರವರೆಗೆ ಮಧ್ಯಪ್ರದೇಶದ ಅಮರ್‌ಕಂಟಕ್‌ನ ಇಂದಿರಾಗಾಂಧಿ ರಾಷ್ಟ್ರೀಯ ಬುಡಕಟ್ಟು ವಿಶ್ವವಿದ್ಯಾಲಯದ ಕುಲಪತಿಗಳಾಗಿ ಸೇವೆ ಸಲ್ಲಿಸಿದ್ದಾರೆ. ಈಗ ಆಂಧ್ರಪ್ರದೇಶ ವಿಜಯನಗರದ ಕೇಂದ್ರೀಯ ಬುಡಕಟ್ಟು ವಿಶ್ವವಿದ್ಯಾಲಯ ಕುಲಪತಿಗಳಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಸಾಮಾಜಿಕ ಬದ್ಧತೆಯೊಂದಿಗೆ ತಮ್ಮ ಬರಹಗಳನ್ನು ಆರಂಭಿಸಿರುವ ಇವರು ಕನ್ನಡ, ಹಿಂದಿ, ಗುಜರಾತಿ ಹಾಗೂ ಇಂಗ್ಲೀಷ್ ಭಾಷೆಗಳಿಗೆ ಸಾಹಿತ್ಯ ಮತ್ತು ಸಾಹಿತ್ಯೇತರ 25ಕ್ಕೂ ಹೆಚ್ಚು ಕೃತಿಗಳನ್ನು ಅನುವಾದ ಮಾಡಿ ಸಮರ್ಥ ಅನುವಾದಕರೆಂಬ ಕೀರ್ತಿಗೆ ಪಾತ್ರರಾಗಿದ್ದಾರೆ. ಭಾರತದ ಬೇರೆ ಬೇರೆ ರಾಜ್ಯಗಳ ವಿಶ್ವವಿದ್ಯಾಲಯಗಳಲ್ಲಿ ಸಿಂಡಿಕೇಟ್ ಸದಸ್ಯರಾಗಿ, ಕೇಂದ್ರ ಹಾಗೂ ರಾಷ್ಟ್ರೀಯ ಶಿಕ್ಷಣ ನೀತಿ, ಬುಡಕಟ್ಟು ಕಲ್ಯಾಣ ಸಮಿತಿ ಸದಸ್ಯರಾಗಿ ಕಾರ್ಯನಿರ್ವಹಿಸಿದ್ದಾರೆ. ಡಾ ಟಿ.ವಿ.ಕಟ್ಟಿಮನಿ ಅವರ ಶೈಕ್ಷಣಿಕ ಸಾಧನೆಗಳನ್ನು ಪುರಸ್ಕರಿಸಿ ಕನ್ನಡ ವಿಶ್ವವಿದ್ಯಾಲಯವು 32ನೇ ನುಡಿಹಬ್ಬದಲ್ಲಿ ಪ್ರತಿಷ್ಠಿತ 'ನಾಡೋಜ' ಗೌರವ ಪದವಿಯನ್ನು ನೀಡಿ ಗೌರವಿಸಿದೆ.

ಡಾ ಎಸ್.ಸಿ.ಶರ್ಮಾ: ತುಮಕೂರು ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿಗಳಾದ ಪ್ರೊ. ಎಸ್.ಸಿ. ಶರ್ಮಾ ಅವರು 27.03.1959 ರಂದು ಜನಿಸಿದರು. 1984 ರಲ್ಲಿ ಬೆಂಗಳೂರಿನ ಬಿ.ಎಂ.ಎಸ್. ಇಂಜಿನೀಯರಿಂಗ್ ಕಾಲೇಜಿನಿಂದ ಬಿ.ಇ. ಪದವಿ, 1988ರಲ್ಲಿ ಬೆಂಗಳೂರಿನ ಎಂ.ಎಸ್ ರಾಮಯ್ಯ ಇನ್ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ಕಾಲೇಜಿನಿಂದ ಮೆಟೀರಿಯಲ್ ಕಾಸ್ಟಿಂಗ್ ಸೈನ್ಸ್ ಮತ್ತು ಇಂಜಿನೀಯರಿಂಗ್(ಲೋಹದ ಎರಕ ವಿಜ್ಞಾನ ಮತ್ತು ಇಂಜಿನೀಯರಿಂಗ್) ವಿಷಯದಲ್ಲಿ ಎಂ.ಇ. ಪದವಿಯನ್ನು ಪಡೆದರು. 1991ರಲ್ಲಿ ಮೈಸೂರು ವಿಶ್ವವಿದ್ಯಾಲಯದಿಂದ ಮೆಕ್ಯಾನಿಕಲ್ ಇಂಜಿನೀಯರಿಂಗ್ ವಿಷಯದಲ್ಲಿ ಪಿಎಚ್.ಡಿ ಪದವಿಯನ್ನು ಪೂರೈಯಿಸಿದರು. 1998 ರಲ್ಲಿ ಮಂಗಳೂರು ವಿಶ್ವವಿದ್ಯಾಲಯದಿಂದ ಹಾಗೂ 2007 ರಲ್ಲಿ ಆಸ್ಟ್ರೇಲಿಯಾದ ಡೀಕಿನ್ ವಿಶ್ವವಿದ್ಯಾಲಯದಿಂದ ಮೆಟೀರಿಯಲ್ ಸೈನ್ಸ್ ವಿಷಯದಲ್ಲಿ ಅಧ್ಯಯನ ನಡೆಸಿ ಡಾಕ್ಟರ್ ಆಫ್ ಸೈನ್ಸ್ ಪದವಿಯನ್ನು ಪಡೆದರು. ಇವುಗಳ ಜೊತೆಗೆ 2003ರಲ್ಲಿ ಕುವೆಂಪು ವಿಶ್ವವಿದ್ಯಾಲಯದಿಂದ ಗಣಕ ವಿಜ್ಞಾನ ಮತ್ತು ತಂತ್ರಜ್ಞಾನ ವಿಷಯದಲ್ಲಿ ಡಾಕ್ಟರ್ ಆಫ್ ಸೈನ್ಸ್ ಪದವಿಯನ್ನು, 2007 ರಲ್ಲಿ ಕೊಯಂಬತ್ತೂರಿನ ಅವಿನಾಶಿಲಿಂಗ ಮಹಿಳಾ ವಿಶ್ವವಿದ್ಯಾಲಯದ ತಾಂತ್ರಿಕ ನಿಕಾಯದಿಂದ ಡಾಕ್ಟರ್ ಆಫ್ ಸೈನ್ಸ್ ಹಾಗೂ 2007ರಲ್ಲಿ ಅದೇ ವಿಶ್ವವಿದ್ಯಾಲಯದ ಸಂಗೀತ ನಿಕಾಯದಿಂದ ಡಾಕ್ಟರ್ ಆಫ್ ಲೆಟರ್ಸ್ ಪದವಿಯನ್ನು ಪಡೆದರು. 2013ರಲ್ಲಿ ಬೆಳಗಾವಿಯ ರಾಣಿ ಚೆನ್ನಮ್ಮ ವಿಶ್ವವಿದ್ಯಾಲಯದಿಂದ ಮ್ಯಾನೇಜ್‌ಮೆಂಟ್ ವಿಷಯದಲ್ಲಿ ಡಿಲಿಟ್ ಪದವಿಯನ್ನು ಪಡೆದಿದ್ದಾರೆ. ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ ಬಳ್ಳಾರಿ, ಕುವೆಂಪು ವಿಶ್ವವಿದ್ಯಾಲಯ ಶಿವಮೊಗ್ಗ, ಅವಿನಾಶಿಲಿಂಗಂ ಮಹಿಳಾ ವಿಶ್ವವಿದ್ಯಾಲಯ ಕೊಯಂಬತ್ತೂರು, ಛತ್ರಪತಿ ಶಾಹುಜೀ ಮಹಾರಾಜ ವಿಶ್ವವಿದ್ಯಾಲಯ ಕಾನ್ಪುರ, ಶ್ರೀ ಚಂದ್ರಶೇಖರೇಂದ್ರ ಸರಸ್ವತಿ ವಿಶ್ವವಿದ್ಯಾಲಯ >>3




**32ನೇ ನುಡಿ ಹಬ್ಬದ ಗಣ್ಯರ ಭಾಷಣ 3ನೇ ಪುಟದಲ್ಲಿ..**







## ಮೈಕ್ರೋ ನ್ಯೂಸ್

### ವಿಜಯನಗರ ಜಿಲ್ಲಾ ವಾರ್ತಾಧಿಕಾರಿಯಾಗಿ ಗವಿಸಿದ್ದಪ್ಪ ಹೊಸಮನಿ ಅಧಿಕಾರ ಸ್ವೀಕಾರ

**ಹಂಪಿ ಟೈಮ್ಸ್ ಹೊಸಪೇಟೆ**



ವಿಜಯನಗರ ಜಿಲ್ಲೆಯ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಹಿರಿಯ ಸಹಾಯಕ ನಿರ್ದೇಶಕರಾಗಿ ಗವಿಸಿದ್ದಪ್ಪ ಹೊಸಮನಿ ಅವರು ಇತ್ತೀಚೆಗೆ ಅಧಿಕಾರ ಸ್ವೀಕರಿಸಿದರು. ಮೂಲತಃ ಕೊಪ್ಪಳ ಜಿಲ್ಲೆಯವರಾದ ಗವಿಸಿದ್ದಪ್ಪ ಅವರು ಈ ಮೊದಲು ಬೀದರ, ವಿಜಯಪುರ, ಕೊಪ್ಪಳ, ರಾಯಚೂರು ಜಿಲ್ಲೆಗಳಲ್ಲಿ ಜಿಲ್ಲಾ ವಾರ್ತಾಧಿಕಾರಿಯಾಗಿ ಸೇವೆ ಸಲ್ಲಿಸಿದ್ದಾರೆ. ಲೇಖಕರು ಆಗಿರುವ ಗವಿಸಿದ್ದಪ್ಪ ಅವರು ಕಥಾ ಸಂಕಲನ ಪ್ರಕಟಿಸಿದ್ದಾರೆ. ಬಿ. ಧನಂಜಯಪ್ಪ ಅವರು ಈ ಮೊದಲು ವಿಜಯನಗರ ಜಿಲ್ಲೆಯ ವಾರ್ತಾಧಿಕಾರಿಯಾಗಿದ್ದರು.


COLD-PRESSED OIL
TASTES GOOD
Food cooked in cold-pressed oil has an inherent flavor and taste.
Groundnut oil
Coconut Oil
Safflower Oil
Nandi Enterprises
C/o HAMPI TIMES, HOSAPETE
9482 599 089


# ಹೈಟೆಕ್ ಹಾರ್ವೆಸ್ಟರ್ ಹಬ್ ಸ್ಥಾಪನೆಗೆ ಅರ್ಜಿ ಆಹ್ವಾನ

■ **ಹಂಪಿ ಟೈಮ್ಸ್ ಹೊಸಪೇಟೆ**

ಕೃಷಿ ಇಲಾಖೆಯಿಂದ ಹೈಟೆಕ್ ಹಾರ್ವೆಸ್ಟರ್ ಹಬ್ ಯೋಜನೆಯಡಿ ಹೈಟೆಕ್ ಹಾರ್ವೆಸ್ಟರ್ ಹಬ್‌ಗಳ ಸ್ಥಾಪನೆಗೆ ಅರ್ಜಿ ಆಹ್ವಾನಿಸಲಾಗಿದೆ.

ಕೃಷಿಯಲ್ಲಿ ಯಂತ್ರೋಪಕರಣಗಳನ್ನು ರೈತರಿಗೆ ಬಾಡಿಗೆ ಆಧಾರದಲ್ಲಿ ಒದಗಿಸುವಂತೆ ಸ್ಥಾಪಿಸಲಾಗಿರುವ ಕೃಷಿಯಲ್ಲಿ ಯಂತ್ರಧಾರೆ ಕೇಂದ್ರಗಳನ್ನು ಜಿಲ್ಲೆಯಲ್ಲಿ ಇನ್ನಷ್ಟು ಬಲ ಪಡಿಸಲು ಹೈಟೆಕ್ ಹಾರ್ವೆಸ್ಟರ್ ಹಬ್ ಯೋಜನೆಯಡಿ ಕಂಬೈನ್ಡ್ ಹಾರ್ವೆಸ್ಟರ್ ಹಬ್ ಹಾಗೂ ಶುಗರ್‌ಕೇನ್ ಹಾರ್ವೆಸ್ಟರ್ ಹಬ್ ಸ್ಥಾಪನೆಗಾಗಿ ಆಸಕ್ತರಿಂದ ಅರ್ಜಿ ಸಲ್ಲಿಸಬಹುದಾಗಿದೆ.

ಯಂತ್ರಗಳನ್ನು ಬಾಡಿಗೆಗೆ ನೀಡುವ ಮೂಲಕ ರೈತರು ಹೆಚ್ಚುವರಿ ಆದಾಯ ಪಡೆಯಬಹುದಾಗಿದೆ. ಹೈಟೆಕ್ ಹಾರ್ವೆಸ್ಟರ್ ಹಬ್‌ಗಳನ್ನು ಬೆಳೆಯ ವಿಧ ಮತ್ತು ಕಟಾವು ಅವಧಿಯ ಆಧಾರದ ಮೇಲೆ ಕಾರಿಡಾರ್ ಮಾದರಿಯಲ್ಲಿ ಸ್ಥಾಪಿಸುವುದು. ಹೈಟೆಕ್ ಹಾರ್ವೆಸ್ಟರ್ ಹಬ್‌ಗಳನ್ನು ಅನುಷ್ಠಾನ ಮಾಡಲು ಚಾಲ್ತಿಯಲ್ಲಿರುವ ಕೃಷಿ ಯಂತ್ರಧಾರೆ ಕೇಂದ್ರಗಳು, ಸೇವಾದಾರ ಸಂಸ್ಥೆಗಳು, ವೈಯಕ್ತಿಕ ಫಲಾನುಭವಿಗಳು ಹಾಗೂ ನೊಂದಾಯಿತ ಸಂಘ ಸಂಸ್ಥೆಗಳು (ಎಫ್.ಪಿ.ಓ ಗಳನ್ನೊಳಗೊಂಡಂತೆ) ಭಾಗವಹಿಸಬಹುದಾಗಿರುತ್ತದೆ.




ಸಾಮಾನ್ಯ ವರ್ಗದ ರೈತರಿಗೆ ಗರಿಷ್ಠ ಶೇ.50 ರಂತೆ (ಗರಿಷ್ಟರೂ. 40 ಲಕ್ಷ ಸಹಾಯಧನ), ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ರೈತರಿಗೆ ಗರಿಷ್ಠ ಶೇ.70 ರಂತೆ ಹಾಗೂ ಸಂಘ-ಸಂಸ್ಥೆಗಳಿಗೆ (ಚಾಲ್ತಿಯಲ್ಲಿರುವ ಕೃಷಿ ಯಂತ್ರಧಾರೆ ಕೇಂದ್ರಗಳ ಸೇವಾದಾರ ಸಂಸ್ಥೆ/ ಎಫ್.ಪಿ.ಓ ಗಳನ್ನೊಳಗೊಂಡಂತೆ) ಗರಿಷ್ಠ ಶೇ.70 ರಂತೆ (ಗರಿಷ್ಟ ರೂ.50 ಲಕ್ಷ ಸಹಾಯಧನ) ಸಹಾಯಧನ ಪಡೆಯಲು ಅವಕಾಶವಿರುತ್ತದೆ.

ಸಂಘ, ಸಂಸ್ಥೆಗಳು (ಎಫ್.ಪಿ.ಓ ಗಳನ್ನೊಳಗೊಂಡಂತೆ) ಟ್ರಸ್ಟಳು ಮಾತ್ರ ಕಂಬೈಂಡ್ ಹಾರ್ವೆಸ್ಟರ್ ಮತ್ತು ಶುಗರ್‌ಕೇನ್ ಹಾರ್ವೆಸ್ಟರ್‌ಗಳನ್ನು ಒಳಗೊಂಡ "ಕೋಂಬೋ ಹಾರ್ವೆಸ್ಟರ್ ಹಬ್"ಗೆ ಅರ್ಜಿಯನ್ನು ಸಲ್ಲಿಸಲು ಅವಕಾಶವಿದೆ. ಕೃಷಿ ಯಂತ್ರೋಪಕರಣವಾರು ನಿಗದಿಪಡಿಸಿದ ಗರಿಷ್ಠ ಸಹಾಯಧನವನ್ನು ಒದಗಿಸಲಾಗುವುದು. ಸಹಾಯಧನವನ್ನು "ಕ್ರೆಡಿಟ್ ಲಿಂಕ್ಡ್ ಬ್ಯಾಕ್‌ಎನ್ಡೆಡ್ ಸಬ್ಸಿಡಿ" ಮುಖಾಂತರ ಬಿಡುಗಡೆ ಮಾಡಲಾಗುವುದು. ಆಯ್ಕೆಯಾದ ಫಲಾನುಭವಿಗಳು/ಸಂಘ-ಸಂಸ್ಥೆಗಳು ಕೃಷಿ ಮೂಲಭೂತ ಸೌಕರ್ಯ ನಿಧಿ (ಎಐಎಫ್ - ಅಗ್ರಿಕಲ್ಚರಲ್‌ಇನ್ಫ್ರಾಸ್ಟ್ರೆಕ್ಚರ್ ಫಂಡ್) ಸಾಲದ ನೆರವನ್ನು ಪಡೆಯಲು ಸಹ ಅವಕಾಶವಿರುತ್ತದೆ.

ಸಹಕಾರ ಸಂಘಗಳ ನಿಬಂಧನೆಯಂತೆ, ಕಂಪನಿ ಕಾಯ್ದೆಯಡಿ ನೋಂದಾಯಿಸಿದ ಸಂಘ-ಸಂಸ್ಥೆಗಳು ಮಾತ್ರ ಅರ್ಜಿ ಸಲ್ಲಿಸಲು ಅರ್ಹತೆಯನ್ನು ಹೊಂದಿರುತ್ತವೆ. ಕೃಷಿ ಯಂತ್ರಧಾರೆ ಕೇಂದ್ರಗಳ ಸೇವಾದಾರ ಸಂಸ್ಥೆಗಳ, ಕೃಷಿ ಯಂತ್ರೋಪಕರಣಗಳ ಬ್ಯಾಂಕ್, ರೈತಉತ್ಪಾದಕ ಸಂಸ್ಥೆಗಳು, ಇತರೆ ಸಂಘ-ಸಂಸ್ಥೆಗಳು ರಾಜ್ಯಾದ್ಯಂತ ಅರ್ಜಿಗಳನ್ನು ಸಲ್ಲಿಸಲು ಅವಕಾಶವಿದ್ದು, ಆರು ಅಥವಾ ಒಂಬತ್ತು ವರ್ಷಗಳ ಕಾಲ ಸಮರ್ಪಕವಾಗಿ ಕಾರ್ಯನಿರ್ವಹಿಸುತ್ತಿರುವ ಮತ್ತು ತಪಾಸಣೆಯಲ್ಲಿ ಸಂಪೂರ್ಣವಾಗಿ ಲೆಕ್ಕ-ಪತ್ರ ಹಾಗೂ ಯಂತ್ರೋಪಕರಣಗಳನ್ನು ಹಾಜರು ಪಡಿಸಿರುವ ಕೃಷಿ ಯಂತ್ರಧಾರೆ ಕೇಂದ್ರಗಳ ಸೇವಾದಾರ ಸಂಸ್ಥೆಗಳು ಮಾತ್ರ ಅರ್ಜಿ ಸಲ್ಲಿಸಬಹುದಾಗಿರುತ್ತದೆ.

ಅರ್ಜಿಗಳನ್ನು ತಾಲ್ಲೂಕು ಸಹಾಯಕ ಕೃಷಿ ನಿರ್ದೇಶಕರ ಕಚೇರಿಯಲ್ಲಿ ಜನವರಿ 20ರೊಳಗಾಗಿ ಸಲ್ಲಿಸಬೇಕು. ಸಹಾಯಕ ಕೃಷಿ ನಿರ್ದೇಶಕರು ಸ್ವೀಕೃತವಾಗುವ ಎಲ್ಲಾ ಅರ್ಜಿಗಳನ್ನು ಎಲ್ಲಾ ಅಂಶಗಳನ್ವಯ ಪರಿಶೀಲಿಸಿ ಸಂಬಂಧಿಸಿದ ಉಪ ಕೃಷಿ ನಿರ್ದೇಶಕರ ಮುಖಾಂತರ ಜಿಲ್ಲಾ ಜಂಟಿ ಕೃಷಿ ನಿರ್ದೇಶಕರಿಗೆ ಸಲ್ಲಿಸಬೇಕು.

ಹೆಚ್ಚಿನ ಮಾಹಿತಿಗಾಗಿ ಸಮೀಪದ ರೈತ ಸಂಪರ್ಕಕೇಂದ್ರ ಅಥವಾ ಸಹಾಯಕ ಕೃಷಿ ನಿರ್ದೇಶಕರ ಕಚೇರಿಗೆ ಸಂಪರ್ಕಿಸಬಹುದಾಗಿದೆ ಎಂದು ವಿಜಯನಗರ ಜಂಟಿ ಕೃಷಿ ನಿರ್ದೇಶಕರಾದ ಶರಣಪ್ಪ ಮುದುಗಲ್ ತಿಳಿಸಿದ್ದಾರೆ.


## ಒಳ ಪುಟಗಳಲ್ಲಿ

ಗ್ಯಾರಂಟಿ ಫಲಾನುಭವಿಗಳಲ್ಲಿ ಬಿಜೆಪಿಯವರೇ ಅಧಿಕ
– ಸಿಎಂ ಸಿದ್ದರಾಮಯ್ಯ
ಪುಟ 2 ರಲ್ಲಿ ಓದಿ

ಬಿದಿಯಲ್ಲಿ ಸಾಹಿತ್ಯ
– ರಹಮತ್ ತರೀಕೆರಿ
ಪುಟ 2 ರಲ್ಲಿ ಓದಿ

ಕನ್ನಡದ ದೇಸಿ ಪ್ರಜ್ಞೆ ಹೆಚ್ಚಲಿ
ಪುಟ 3 ರಲ್ಲಿ ಓದಿ

## ವಚನ ಅರಿವು

# ಅನ್ಯ ದೈವದ ಸಂಗ ಬೇಡ

**ನಂಬಿದ ಹೆಂಡತಿಗೆ ಗಂಡನೊಬ್ಬ ಕಾಣಿರೋ,**
**ನಂಬಬಲ್ಲ ಭಕ್ತಂಗೆ ದೇವನೊಬ್ಬನೆ ಕಾಣಿರೋ,**
**ಬೇಡ ಬೇಡ, ಅನ್ಯ ದೈವದ ಸಂಗ ಹೊಲ್ಲ!**
**ಬೇಡ ಬೇಡ, ಪರದೈವದ ಸಂಗ ಹೊಲ್ಲ!**
**ಬೇಡ ಬೇಡ, ಅನ್ಯದೈವವೆಂಬುದು ಹಾದರ ಕಾಣಿರೋ,**
**ಕೂಡಲಸಂಗಮದೇವ ಕಂಡಡೆ ಮೂಗ ಕೊಯ್ವ ಕಾಣಿರೊ.**

**– ಬಸವಣ್ಣ**

ಪತಿವ್ರತೆಯಾದ ಹೆಂಡತಿಗೆ ಗಂಡನೊಬ್ಬನೆ. ಅವಳು ಪರಪುರುಷನ ಸಂಗ ಮಾಡುವುದಿಲ್ಲ. ಹಾಗೇಯೇ ನಂಬಿರುವ ಭಕ್ತರಿಗೆ ಒಬ್ಬನೆ ದೇವರಿರುತ್ತಾನೆ. ಬೇರೆ ಪುರುಷ ಅಥವ ಸ್ತ್ರೀಯ ಸಂಘವು ಹೇಗೆ ಹಾದರವಾಗುತ್ತದೆಯೋ ಹಾಗೆಯೇ ಪರದೈವ ಅಥವ ತನ್ನ ಇಷ್ಟಲಿಂಗವಲ್ಲದೆ ಅನ್ಯದೈವಕ್ಕೆ ಶರಣಾದರೆ, ಪೂಜಿಸಿದರೆ ಹಾದರವಾಗುತ್ತದೆ. ಇಂತಹ ಶುದ್ಧ ಮನಸ್ಸಿಲ್ಲದವರ ಮೂಗನ್ನು ಕೊಯ್ದು, ಅವರ ರೂಪ ಕೆಡಸಿ, ಅವಮಾನ ಮಾಡಿ ಶಿಕ್ಷಿಸುತ್ತಾನೆ ಶಿವ.

ಬಸವಣ್ಣನ ಮುಂದೆ ಅನೇಕ ಸವಾಲುಗಳಿದ್ದಂತೆ ದೈವದ ಕುರಿತು ಸವಾಲು ಇತ್ತು. ಹಾಗಾಗಿ ಜನರಲ್ಲಿ ಏಕದೈವ ನಿಷ್ಠೆ ಗಟ್ಟಿ ಮಾಡುವ ಉದ್ದೇಶವು ಇಂತಹ ವಚನಗಳ ರಚನೆಗೆ ಕಾರಣವು ಇರಬಹುದಾಗಿದೆ.

(ಡಾ. ನಂದೀಶ್ವರ ದಂಡೆ ಅವರ ವಚನ ಜೀವನ ಮಾರ್ಗ ಪುಸ್ತಕದಿಂದ)

## ನುಡಿಹಬ್ಬದಲ್ಲಿ ಡಿ.ಲಿಟ್ ಪದವಿ ಜತೆಗೆ ದಾಖಲೆಯ 275 ಸಂಶೋಧನಾರ್ಥಿಗಳಿಗೆ ಡಾಕ್ಟರೇಟ್ ಪದವಿ ಪ್ರದಾನ

**ಹಂಪಿ ಟೈಮ್ಸ್ ಹೊಸಪೇಟೆ**

ಶಿಸ್ತುಬದ್ಧ ಸಂಶೋಧನೆಗೆ ಜಾಗತಿಕವಾಗಿ ಹೆಸರಾದ ವಿಜಯನಗರ ಜಿಲ್ಲೆಯ ಹಂಪಿ ಕನ್ನಡ ವಿಶ್ವ ವಿದ್ಯಾಲಯದ 32ನೇ ಘಟಿಕೋತ್ಸವದಲ್ಲಿ ಈ ಬಾರಿ ಒಬ್ಬರಿಗೆ ಡಿ.ಲಿಟ್ ಹಾಗೂ ದಾಖಲೆಯ 275 ಜನರಿಗೆ ಡಾಕ್ಟರೇಟ್ ಪದವಿಯನ್ನು ಪ್ರದಾನ ಮಾಡಲಾಯಿತು.

ಉನ್ನತ ಶಿಕ್ಷಣ ಸಚಿವರು ಹಾಗೂ ಸಮಕುಲಾಧಿಪತಿಗಳಾದ ಡಾ.ಎಂ.ಸಿ.ಸುಧಾಕರ್ ಅವರು ಸಂಶೋಧನಾರ್ಥಿಗಳಿಗೆ ಡಾಕ್ಟರೇಟ್ ಪದವಿ ಪ್ರದಾನ ಮಾಡಿದರು. ಈ ವೇಳೆ ಕುಲಪತಿಗಳಾದ ಡಾ.ಡಿ.ವಿ.ಪರಮ ಶಿವಮೂರ್ತಿ, ಕುಲಸಚಿವರಾದ ವಿಜಯ್ ಪೂಣಚ್ಚ ತಂಬಂಡ ಹಾಗೂ ನಾಡೋಜ್ ಪದವಿ ಪುರಸ್ಕೃತರು ಸಂಶೋಧನಾರ್ಥಿಗಳಿಗೆ ಅಭಿನಂದಿಸಿದರು.

ಕುಟುಂಬದವರಿಂದ ಹರ್ಷ: ಹಲವು ವರ್ಷಗಳ ಶಿಸ್ತುಬದ್ಧ ಸಂಶೋಧನಾ ಕಾರ್ಯದ ಫಲವಾದ ಡಾಕ್ಟರೇಟ್ ಪದವಿಗೆ 375 ಸಂಶೋಧನಾರ್ಥಿಗಳು ಭಾಜನರಾದರು. ವೇದಿಕೆ ಏರಿ ಕುಲಾಧಿಪತಿಗಳಿಂದ ಡಾಕ್ಟರೇಟ್ ಪದವಿ ಪಡೆದ ಸಂಶೋಧನಾರ್ಥಿಗಳ ಮೊಗದಲ್ಲಿ ಸಂತಷ ಕಂಡು ಬಂದಿತು. ಹಲವು ವರ್ಷಗಳ ಕಾರ್ಯಸಾಧನೆಯನು ಕಂಡು ಸಂಶೋಧನಾರ್ಥಿಗಳ ಕುಟುಂಬದವರು ಸಹ ಹರ್ಷ ವ್ಯಕ್ತಪಡಿಸಿದರು. ಗೆಳೆಯರು ಮತ್ತು ವಿದ್ಯಾರ್ಥಿ, ಅಧ್ಯಾಪಕರು ಪರಸ್ಪರ ಶುಭಾಶಯ ವಿನಿಮಯ ಮಾಡಿಕೊಂಡರು.

ಲಲಿತ ಕಲೆಗಳ ನಿಕಾಯದ ಒಬ್ಬರಿಗೆ ಡಿ.ಲಿಟ್ ಪದವಿ ಹಾಗೂ ಭಾಷಾ ನಿಕಾಯ, ಸಮಾಜವಿಜ್ಞಾನಗಳ ನಿಕಾಯ ಮತ್ತು ಲಲಿತಕಲೆಗಳ ನಿಕಾಯ ಸೇರಿ ಒಟ್ಟು 275 ಜನರಿಗೆ ಡಾಕ್ಟರೇಟ್ ಪದವಿ ಪ್ರದಾನ ಮಾಡಲಾಯಿತು.

# ಬೀದಿಯಲ್ಲಿ ಸಾಹಿತ್ಯ





**ರಹಮತ್ ತರೀಕೆರೆ**
**ಸಂಸ್ಕೃತಿ ಚಿಂತಕರು**

ಒಮ್ಮೆ ಮನೆಯಿಂದ ವಿಶ್ವವಿದ್ಯಾಲಯಕ್ಕೆ ಹೋಗುತ್ತಿದ್ದೆ. ನಡುವೆ ಗಾಳೆಮ್ಮನಗುಡಿ ಸಿಗುತ್ತದೆ. ಆದಿನ ಅಮ್ಮನ ಜಾತ್ರೆಯ ದೆಸೆಯಿಂದ ಟ್ರಾಫಿಕ್ ಜಾಮಾಗಿ, ಕಾರನ್ನು ಬಹಳ ಹೊತ್ತು ರಸ್ತೆಯ ಮೇಲೆ ನಿಲ್ಲಿಸಿಕೊಂಡು ಇರಬೇಕಾಯಿತು. ಕಾರಿನ ಮುಂದೆ ಜಾತ್ರೆಗೆ ಹೊರಟಿದ್ದ ಒಂದು ಪಿಕಪ್‌ವ್ಯಾನು ನಿಂತಿತ್ತು. ಅದರೊಳಗೆ ಜಾತ್ರೆಗೆ ಒಯ್ಯಲೆಂದು ಕುರಿಗಳನ್ನು ತುಂಬಿದ್ದರು. ವ್ಯಾನನ್ನು ನೋಡುತ್ತಲೇ ಎಲ್ಲ ಜೀವಗಳನ್ನು ಸಮಾನವಾಗಿ ಪರಿಗಣಿಸಿ ಜನರನ್ನೂ ಕುರಿಗಳನ್ನೂ ಒಟ್ಟಿಗೆ ಸಾಗಿಸುತ್ತಿದ್ದ ನಮ್ಮೂರಿನ ಸಮಾಜವಾದಿ ಬಸ್ಸುಗಳು ನೆನಪಾದವು. ಪಿಕಪ್ ವ್ಯಾನಿನಲ್ಲಿದ್ದ ಕುರಿಗಳೆಲ್ಲವೂ ನನಗೆ ಬೆನ್ನುಕೊಟ್ಟು ನಿಂತಿದ್ದವು. ಒಂದು ಟಗರು ಮಾತ್ರ ನನ್ನನ್ನೇ ಕುತೂಹಲದಿಂದ ದಿಟ್ಟಿಸುತ್ತಿತ್ತು. ಹಬ್ಬಕ್ಕೆ ತಂದ ಕುರಿ ಕೊಂದಹರು ಎಂಬುದನರಿಯದೆ ತೋರಣಕ್ಕೆ ತಂದ ತಳಿರನ್ನು ಮೇಯುವುದನ್ನು ಶರಣರು ಕರುಣೆಯಿಂದ ಚಿತ್ರಿಸಿದ್ದಾರಷ್ಟೆ. ನನಗಾದರೂ ಟಗರು ಜಾತ್ರೆಯಲ್ಲಿ ಬಲಿಯಾಗುವ ಮುನ್ನ ಲೋಕವನ್ನು ಕಡೆಯ ನೋಟದಲ್ಲಿ ತುಂಬಿಕೊಳ್ಳುತ್ತ ಇರುವಂತೆ ಭಾಸವಾಯಿತು.

ಅದರ ಕಣ್ಣಲ್ಲಿ ಕಣ್ಣಿಟ್ಟು ಭಾವನೆಯನ್ನು ಓದಲೆತ್ನಿಸಿದೆ. ಅಚ್ಚರಿಯಾಯಿತು. ಅದರ ಕಣ್ಣಲ್ಲಿ ಮರಣ ಭಯವಿರಲಿಲ್ಲ. ಬದಲಿಗೆ ನನ್ನ ಬಗ್ಗೆ 'ಪಾಪದವನು, ಕಾರೊಳಗೆ ಒಬ್ಬನೇ ಇದ್ದಾನೆ. ಎಲ್ಲಿ ಹೋಗಬೇಕಿತ್ತೊ ಏನೋ. ಟ್ರಾಫಿಕ್ಕಿನಲ್ಲಿ ಸಿಕ್ಕಿಕೊಂಡು ನರಳುತ್ತಿದ್ದಾನೆ' ಎಂಬ ಮರುಕಭಾವವಿತ್ತು. ಅದರೊಳಗಿನ ಅಣಕುಭಾವವು ಚೂರಿಯಂತೆ ಇರಿಯಿತು. ಅದರ ಕಣ್ತಪ್ಪಿಸಿ ನೋಟವನ್ನು ತುಸು ಕೆಳಗಿಳಿಸಿ ವ್ಯಾನಿನ ಬೆನ್ನನ್ನು ಗಮನಿಸಿದೆ. ಅಲ್ಲೊಂದು ಬರೆಹವಿತ್ತು: 'ತಿಳಿಬ್ಯಾಡ ಕುರಿಕಾಯೊ ಹುಡುಗನ ಹಗರ, ಮಂದೆಯೊಳಗಿದ್ದರೆ ಅಂವ ಬೀಜದ ಟಗರ'. ಟಗರು ನನ್ನತ್ತ ನಿಷ್ಠುರ ಮರುಕದಿಂದ ನೋಡಲು ಈ ಬೀಜವಾಕ್ಯವೇ ಕಾರಣವಿರಬೇಕು ಅಥವಾ 'ಕೊಂದವರುಳಿದರೇ ಕೂಡಲ ಸಂಗಮದೇವಾ?' ಎಂದು ನನ್ನನ್ನು ಛೇಡಿಸುತ್ತಿರಬೇಕು. ಚಿಂತನೆಗೆ ಬಿದ್ದೆ.

ನನಗೆ ಗೋಡೆ ಬೋರ್ಡು ವಾಹನಗಳ ಮೇಲೆ ಸೃಷ್ಟಿಯಾಗಿರುವ ಬೀದಿಸಾಹಿತ್ಯ ಓದುವ ದುರಭ್ಯಾಸ ಬಾಲ್ಯದಿಂದಲೂ ಬಂದಿದೆ. ಕಾಲುಬಂದ ಮಗು ಎಲ್ಲೆಂದರಲ್ಲಿ ನಡೆವಂತೆ, ಅಕ್ಷರ ಕಲಿತ ಬಳಿಕ ಅಂಗಡಿ ಬೋರ್ಡುಗಳ ಬರೆಹ ಓದಲಾರಂಭಿಸಿದೆ. ಅಪ್ಪ ನನ್ನ ಶಿಕ್ಷಣದ ಮಟ್ಟ ಅಳೆಯಲು ಬಸ್ಸಿನ ಬೋರ್ಡನ್ನು ತೋರಿಸಿ ಓದುವಂತೆ ಹೇಳುತ್ತಿದ್ದ. ಒಮ್ಮೆ ನಮ್ಮ ಕುಲುಮೆಯ ಮುಂದೆ ನಿಂತಿದ್ದ ಲಾರಿಯ ಮೇಲಿರುವ ಬರೆಹ ಓದಲು ಹೇಳಿದ. 'ವಿಶಾಲ ಮೈಸೂರು ರಾಜ್ಯದ ರಹದಾರಿ ಪಡೆದಿದೆ' ಎಂದೆ. ಅವನ ಮುಖ ಕಮಲದಂತೆ ಅರಳಿತು. ಮಗ ಜ್ಞಾನಸಾಗರವನ್ನೂ ಈಜಿ ಪಾರಂಗತನಾದನೆಂದು ನಾಲ್ಕಾಣೆ ಬಹುಮಾನವಿತ್ತನು. ಬಸ್ಸಿನ ಬೋರ್ಡನ್ನು ಓದಲು ಸಾಧ್ಯವಾದರೆ ಜಗತ್ತಿನ ಎಲ್ಲಿಯಾದರೂ ಬದುಕಬಹುದು ಎಂಬುದು ಅವನ ನಂಬಿಕೆ. ಬಹುಮಾನ ಗಿಟ್ಟಿಸಿದ ಬಳಿಕ, ಅಂಗಡಿ ಬೋರ್ಡು, ಭಿತ್ತಿ ಬರೆಹ, ಲಗ್ನಪತ್ರಿಕೆ, ಸಿನಿಮಾಪೋಸ್ಟರು– ಎಲ್ಲವನ್ನು ಗಟ್ಟಿಯಾಗಿ ಓದುವ ವ್ಯಸನಕ್ಕೆ ಒಳಗಾದೆ. ಇದಕ್ಕೆ ಬೇಕಾಗಿ ಸರ್ವಾಂತರ್ಯಾಮಿ ಸರ್ವಗುಣ ಸಂಪನ್ನ ಬೀದಿಸಾಹಿತ್ಯವು ನಮ್ಮೂರ ಪೇಟೆ ಬೀದಿಯಲ್ಲಿತ್ತು.

ಬೀದಿ ಸಾಹಿತ್ಯವು ದೃಷ್ಟಿಕೋನವನ್ನು ಮಾತ್ರವಲ್ಲ, ಬದುಕಿನ ಕ್ರಮವನ್ನೂ ಬದಲಿಸಬಲ್ಲ ಋಷಿವಾಣಿ ನನಗೆ ಸದಾ ಅನಿಸಿದೆ. ಭಾಷೆಯಲ್ಲಿ ಹುಟ್ಟಿದ್ದೆಲ್ಲ ಸಾಹಿತ್ಯ ಎಂಬ ಉದಾರ ದೃಷ್ಟಿಯಿಂದ ನೋಡಿದರೆ, ಕಥೆ ಕಾವ್ಯ ಕಾದಂಬರಿಗಳು ಮಾತ್ರವಲ್ಲ; ಲೋಕನಿಕೃಷ್ಟಕ್ಕೆ ಒಳಗಾದ ತಬ್ಬಲಿಗಳಂತಿರುವ ವಾಹನಸಾಹಿತ್ಯ, ಲಗ್ನಪತ್ರಿಕೆ ಸಾಹಿತ್ಯ, ಗೋಡೆಸಾಹಿತ್ಯ, ಜಾಹಿರಾತು ಸಾಹಿತ್ಯ, ಮೈಲಿಗಲ್ಲು ಸಾಹಿತ್ಯ, ಟಿಕೇಟು ಸಾಹಿತ್ಯ, ಕರಪತ್ರ ಸಾಹಿತ್ಯ, ಪೋಸ್ಟರ್ ಸಾಹಿತ್ಯ, ಬೋರ್ಡು ಸಾಹಿತ್ಯ, ಫ್ಲೆಕ್ಸ್ ಸಾಹಿತ್ಯ, ಡೆಸ್ಕು ಸಾಹಿತ್ಯ, ಶೌಚಾಲಯ ಸಾಹಿತ್ಯ ಮೊದಲಾಗಿ ಅನಂತ ಪ್ರಕಾರಗಳು ಗೋಚರಿಸುತ್ತವೆ. ಇಲ್ಲಿ ಶ್ರೇಷ್ಠ ಕಲಾಕೃತಿಗಳು ಇರಲಿಕ್ಕಿಲ್ಲ; ಆದರೆ ಅದನ್ನು ಬರೆದವರೂ ಲೇಖಕರು. ಅಲ್ಲಿರುವ ಕೆಲವು ಚಿಂತನೆಯ ಮಾತನ್ನು ಓದುವಾಗ 'ಹೌದಲ್ಲ, ಈ ಆಲೋಚನೆ ನನ್ನೊಳಗೂ ಇತ್ತು. ಯಾರೊ ಧೀರರು ಇದನ್ನು ಪ್ರಕಟಿಸುವ ಸಾಹಸ ಮಾಡಿದ್ದಾರೆ' ಅನಿಸುವುದುಂಟು. ಎಂದೂ ಪುಸ್ತಕರೂಪಕ್ಕೆ ಬಾರದ ಈ ಬೀದಿಬದಿಯ ಸಾಹಿತ್ಯವು ಬೀದಿನಾಟಕ, ಬೀದಿಗಾಯನ ಬೀದಿಭಾಷಣಗಳಷ್ಟೇ ಮುಖ್ಯ. ಇದನ್ನು ಓದಲು ಪುಸ್ತಕ ಕೊಳ್ಳಬೇಕಿಲ್ಲ. ಗ್ರಂಥಾಲಯಕ್ಕೆ ಹೋಗಬೇಕಿಲ್ಲ. ರಸ್ತೆಯಲ್ಲಿ ನಡೆಯುವಾಗ ರೈಲು–ಬಸ್ಸಲ್ಲಿ ಪಯಣಿಸುವಾಗ ತಾನೇ ಎದ್ದು ಕಾಣುತ್ತದೆ. ನಮ್ಮ ಹಿರೀಕರು ತಾಮ್ರಪಟ ಕಲ್ಲು ತಾಳೆಗರಿ ಕಾಗದಗಳನ್ನು ಬಳಸಿಕೊಂಡಂತೆ, ಇದು ಗೋಡೆ ಟ್ಯಾಕ್ಟರು ಬಂಡಿ ಆಟೊ ಬಸ್ಸು ಲಾರಿಗಳ ಮೈಯನ್ನೇ ಹಾಳೆ ಮಾಡಿಕೊಂಡಿದೆ. ಕೆಲವು ಪ್ರೇಮಿಗಳು ಪಾರ್ಕಿನ ಮರದ ತೊಗಟೆಗಳ ಚೂಪಾದ ವಸ್ತುವನ್ನೇ ಲೇಖನಿ ಮಾಡಿ ಪ್ರೇಮಕಾವ್ಯ ರಚಿಸಿರುವುದುಂಟು. ಈ ತೊಗಟೆ ಲೇಖಕರು ಗೋಡೆಲೇಖಕರು ಸಾಹಿತ್ಯ ರಚಿಸುವಾಗ ಲೇಖಕರು ಸಾರ್ವಜನಿಕರಿಂದ ನಿಂದೆಯನ್ನೊ ಪೆಟ್ಟನ್ನೂ ತಿಂದಿರಬಹುದು. ಇವರ ಬರೆಹ ನೋಡಿ ಮಂದಿ ಗೇಲಿ ಮಾಡಿರಬಹುದು.

ಹೀಗಾಗಿ ತನ್ನ ಹುಟ್ಟಿನಲ್ಲೇ ನೋವುಂಡಿರುವ ಈ ಸಾಹಿತ್ಯಕ್ಕೆ ಜನರ ನೋವಿಗೆ ಮಿಡಿವ ಗುಣ ಅಂತರ್ಗತವಾಗಿದೆ. ಸಾಹಿತ್ಯವು ಆಸ್ಥಾನವನ್ನು ಬಿಟ್ಟು ಬೀದಿಗೆ ಬರಲಿ ಎಂದು ಕ್ರಾಂತಿಕಾರಿಗಳು ಘೋಷಿಸಿದರು. ಆದರೆ ಅವರ ಸಾಹಿತ್ಯ ಕಪಾಟುಗಳಲ್ಲಿ ಬಂಧಿತವಾಯಿತು. ಕಾವ್ಯ ಬಂತು ಬೀದಿಗೆ ಎಂದು ಹೇಳಿದರು. ಆದರೆ ಬೀದಿಯಲ್ಲೇ ಹುಟ್ಟಿ ಬದುಕಿ ಬೀದಿಪಾಲಾಗಿ ಹುತಾತ್ಮವಾಗುತ್ತಿರುವ ಸಾಹಿತ್ಯ ಅವರ ಕಣ್ಣಿಗೆ ಕಾಣದೆ ಹೋಯಿತು. ತನ್ನೊಳಗೇ ಇರುವ ದೇವರನ್ನು ಅರಿಯದೆ ತೀರ್ಥಯಾತ್ರೆ ಮಾಡುವವರಂತೆ, ಹಿತ್ತಲಲ್ಲಿ ಮದ್ದಿಟ್ಟುಕೊಂಡು ದವಾಖಾನೆಗೆ ಹೋಗುವವರಂತೆ ಇದು. 'ಜನವಾಣಿ ಬೇರು ಕವಿವಾಣಿ ಹೂವು' ಎಂದು ಆಚಾರ್ಯ ಶ್ರೀಕಂಠಯ್ಯನವರು ಘೋಷಿಸುವಾಗ ಅವರ ಮನಸ್ಸಲ್ಲಿ ಇಂತಹ ಬೀದಿಸಾಹಿತ್ಯವಿತ್ತು ಎಂದು ನನ್ನ ಗುಮಾನಿ.

ಬೀದಿಸಾಹಿತ್ಯದಲ್ಲೆಲ್ಲ ವಾಹನಸಾಹಿತ್ಯದ ಪ್ರಮಾಣವೇ ದೊಡ್ಡದು. ಸರ್ಕಾರಿ ಬಸ್ಸುಗಳ ಮೇಲೆ ತಮ್ಮೂರಲ್ಲಿ ಬಸ್ಸು ನಿಲ್ಲಿಸಬೇಕೆಂದು, ರೈತರು ಸೀಮೆಗೊಬ್ಬರ ಬೇಕೆಂದು, ವಿದ್ಯಾರ್ಥಿಗಳು ಉಚಿತ ಪಾಸು ಬೇಕೆಂದು ಬರೆದಿರುತ್ತಾರೆ. ಬೆಳಗಾವಿ ಭಾಗದಲ್ಲಿ ಗಡಿಜಗಳ ಶುರುವಾದರಂತೂ ಎರಡೂ ರಾಜ್ಯದ ಬಸ್ಸುಗಳು ಮುಷ್ಕರ ಕಲಾವಿದರಿಗೆ ಕ್ಯಾನವಾಸು. ಕೆಲವಂತೂ ಮೈತುಂಬ ಹಚ್ಚೆ ಹೊಯ್ಸಿಕೊಂಡಿರುತ್ತವೆ– ಆದಿನಾಥನು ವೃಷಭಾಚಲದಲ್ಲಿ ದಿಗ್ವಿಜಯ ಶಾಸನ ಬರೆಸಲು ಹೋದಾಗ ಬರೆಸಲು ಜಾಗವೇ ಇಲ್ಲದಂತೆ. ನಾನು ಶಿವಮೊಗ್ಗೆಯಲ್ಲಿ ಕಾಲೇಜು ಓದುವಾಗ ನಡೆದ ಮುಷ್ಕರದಲ್ಲಿ, ಬೆಂಗಳೂರಿಗೆ ಹೋಗಿಬರುವ ಕೆಂಪುಬಸ್ಸುಗಳ ಮೇಲೆ ಫೀಸನ್ನು ಕಡಿಮೆ ಮಾಡಬೇಕೆಂದು ಕಪ್ಪನೆಯ ಟಾರಿನಲ್ಲಿ ನಮ್ಮ ನಾಯಕರು ಸಾಹಿತ್ಯ ಬರೆದರು. ಫೀಸು ಸಾಹಿತ್ಯವನ್ನು ಬಸ್ಸುಗಳು ಹೊತ್ತು ತಿರುಗಿದವೇ ಹೊರತು ಬೇಡಿಕೆ ಈಡೇರಲಿಲ್ಲ. ಬದಲಿಗೆ ಬಸ್ಸಿನ ಅಂದ ಹಾಳುಮಾಡಿದರೆಂದು, ವಿದ್ಯಾರ್ಥಿಗಳನ್ನು ಪ್ರಿನ್ಸಿಪಾಲರು ಡಿಬಾರ್ ಮಾಡಿದರು. ಗೋಕಾಕ್ ಚಳುವಳಿ ಕಾಲದಲ್ಲಂತೂ ಬಸ್ಸುಗಳು ಕನ್ನಡಪರ ಘೋಷಣೆಯ ಆಭರಣಗಳಿಂದ ಅಲಕೃಂತವಾದವು. ಬರೆಹಗಳಿಂದ ವಾಹನಗಳ ಗೋಡೆಗಳ ಅಂದಗೆಡಬಹುದು. ಆದರೆ ಜನ ಜಾಗೃತವಾಗಿದ್ದಾರೆ, ಡೆಮಾಕ್ರಸಿ ಜೀವಂತವಾಗಿದೆ ಎಂಬುದಕ್ಕೆ ಅವು ಸಾಕ್ಷ ?ಯಗಳು. ದೇಶದ ಜನಮಾನಸದೊಳಗೆ ಕುದಿವ ಲಾವಾರಸದ ಕನ್ನಡಿಗಳವು. ಜನ ಯಾವಾಗ ಜಾಗೃತಿ ಕಳೆದುಕೊಂಡು ಗೋಡೆಬರೆಹ ನಿಲ್ಲಿಸಿದರೊ, ಆ ಜಾಗವನ್ನು ಕಂಪನಿಯ ಜಾಹಿರಾತುಗಳು ಆಕ್ರಮಿಸಿಕೊಂಡವು.

ಬಸ್ಸಿನ ಮೇಲೆ ಮುಷ್ಕರದಾರರಿಗೆ ಜಾಗ ಬಿಡಬಾರದು ಎಂದೊ ಏನೊ, ಸಾರಿಗೆ ಇಲಾಖೆಯೇ ಸಾಹಿತ್ಯ ಬರೆಸಲು ಆರಂಭಿಸಿತು. ಬಸ್ಸು ಎಲ್ಲಿಗೆ ಹೋಗುತ್ತದೆ ಎಂಬ ಬೋರ್ಡು ಸರಿಯಾಗಿ ಕಾಣದಿದ್ದರೂ 'ಟಿಕೆಟ್ ರಹಿತ ಪ್ರಯಾಣಿಕನೇ ಕಾದಿದೆ ನಿನಗೆ ದಂಡ' ಎಂಬ ಬರೆಹ ಮೈಲಿ ದೂರದಿಂದಲೇ ಕಾಣುತ್ತಿತ್ತು. ಇಂತಹ ಬರೆಹಗಳು ಕನ್ನಡನಾಡಿನಲ್ಲಿ ಟಿಕೇಟುಗಳ್ಳರು ಹೆಚ್ಚಿದ್ದಾರೆ ಎಂಬರ್ಥವನ್ನೂ ಕೊಡುತ್ತಿದ್ದವು. ಚಾಗದ ಭೋಗದ ಅಕ್ಕರದ ಗೇಯದ ಗೊಟ್ಟಿಯ ಅಲಂಪಿನ ಮಾನಿಸರರೆ ಮಾನಿಸರ್ ಎಂದು ಪಂಪ ಕನ್ನಡಿಗರನ್ನು ಬಣ್ಣಿಸಿದ್ದಕ್ಕೆ ಇದು ವಿರುದ್ಧವಲ್ಲವೇ? ನಮ್ಮ ಮರ್ಯಾದೆಯನ್ನು ನಾವೇ ಕಳೆಯುವುದು ಎಷ್ಟು ಸರಿ? ಆದರೂ ಬೀದಿಸಾಹಿತ್ಯವು ಸಮಾಜದಲ್ಲಿರುವ ಗುಣದೋಷಗಳ ಪ್ರತಿಬಿಂಬ ಎಂಬುದರಲ್ಲಿ ಸಂಶಯವಿಲ್ಲ. ದಯವಿಟ್ಟು ಉಗುಳಬೇಡಿ, ಧೂಮಪಾನ ಮಾಡಬೇಡಿ, ಇಲ್ಲಿ ಕಸ ಹಾಕಬಾರದು, ಚಿಲ್ಲರೆಕೊಟ್ಟು ಸಹಕರಿಸಿ, ಪ್ಲಾಸ್ಟಿಕ್ ನಿಷೇಧಿಸಲಾಗಿದೆ, ಸೀಟಿನ ಮೇಲೆ ಕಾಲಿಡಬೇಡಿ, ಕಿಟಕಿ ಹೊರಗೆ ಕೈತಲೆ ಚಾಚಬೇಡಿ, ನಿಮ್ಮ ಸಾಮಾನಿಗೆ ನೀವೇ ಜವಾಬ್ದಾರರು, ಚಾಲಕರೊಂದಿಗೆ ಮಾತಾಡಬೇಡಿ, ಇದು ನಿಮ್ಮ ವಾಹನ: ಶುಚಿಯಾಗಿಡುವುದು ನಿಮ್ಮ ಕರ್ತವ್ಯ, ಉದ್ರಿ ಕೇಳಿ ಸ್ನೇಹ ಕಳೆದುಕೊಳ್ಳಬೇಡಿ, ತಟ್ಟೆಯಲ್ಲಿ ಕೈತೊಳೆಯಬಾರದು, ಎರಡನೇ ಸಲ ಚಟ್ನಿ ಕೊಡಲಾಗುವುದಿಲ್ಲ, ಮಹಿಳೆಯರಿಗೆ ಪ್ರವೇಶವಿಲ್ಲ ಮೊದಲಾದ ಫಲಕಗಳಲ್ಲಿರುವ ವಿಧಿನಿಷೇಧಗಳನ್ನು ಗಮನಿಸಿ. ಕರ್ನಾಟಕದ ಮಹಾಜನರು ಯಾವೆಲ್ಲ ಮೌಲ್ಯಗಳನ್ನು ಮರೆತಿದ್ದಾರೆ, ಯಾವ ಅಪಾರ ಪ್ರಮಾಣದ ಅಶಿಸ್ತು ತಾಂಡವವಾಡುತ್ತಿದೆ ಎಂದು ಇವು ಸಾರಿ ಹೇಳುತ್ತವೆ.

ಹೀಗೆ ಬೀದಿಸಾಹಿತ್ಯದ ಒಂದು ಭಾಗವು ಚಿನ್ನದ ನಾಡಿನ ಗಂಧದ ಬೀಡಿನ ಜನರ ಮರ್ಯಾದೆ ತೆಗೆಯುತ್ತಿದ್ದರೆ, ಇನ್ನೊಂದು ಭಾಗವು ಹೀಗೆ ಪೋಲಿಸರಂತೆ ಗದರಿಸದೆ, ಕಾಂತಾಸಂಹಿತೆಯಂತೆ ಜನರಲ್ಲಿ ಎಚ್ಚರ ಹುಟ್ಟಿಸಿ, ಅವರನ್ನು ತಿದ್ದುತ್ತ ಸತ್ಪ್ರಜೆಗಳನ್ನಾಗಿ ರೂಪಿಸುವ ಹೊಣೆಯನ್ನು ನಿಭಾಯಿಸುತ್ತಿರುತ್ತದೆ. 'ಮುತ್ತು ಕೊಟ್ಟವಳು ಬಂದಾಗ ತುತ್ತು ಕೊಟ್ಟವಳನ್ನು ಮರೆಯಬೇಡ' ಎಂಬುದು ಆಟೋ ಲಾರಿಗಳಲ್ಲಿ ಅತಿಹೆಚ್ಚು ಕಾಣುವ ಶಾಸನ. ಇದು ಭಾರತೀಯ ಕುಟುಂಬಗಳಲ್ಲಿ ನಡೆಯುವ ಭೂಕಂಪದ ಒಂದು ಝಲಕು. ಆದರೆ ಈ ನೈತಿಕ ಉಪದೇಶವು ನಮ್ಮ ಸೀಮೆಯಲ್ಲಿ ಅಕ್ರಮವಾಗಿ ಅದಿರನ್ನು ಹೊತ್ತೊಯ್ಯುವ ಟಿಪ್ಪರುಗಳ ಮೇಲಿರುವುದು ನನಗರ್ಥವಾಗಿಲ್ಲ. ಬೈಕುಗಳ ಮೇಲೆ ಸಾಮಾನ್ಯವಾಗಿ ಪ್ರೇಮಸಂಬಂಧಿ ಬರೆಹಗಳು ಹೆಚ್ಚು. ಕೆಲವು ಜಾಣರು 'ಅಪ್ಪ ಅಮ್ಮನ ಆಶೀರ್ವಾದ' ಎಂದು ಕೆತ್ತಿಕೊಂಡಿರುತ್ತಾರೆ. ಹುಡುಗಿ ಕೂರಿಸಿಕೊಂಡು ಹೋಗುವಾಗ ಅಪಘಾತವಾದರೆ ನಾನು ಕಾರಣವಲ್ಲ ಎಂಬ ಮುಂಗಡ ಜಾಮೀನದು. ಈಚೆಗೆ ಈ ಬರೆಹ 'ವೈರಿಯ ಆರ್ಶಿವಾದ' ಎಂದೂ ಬದಲಾಗಿದೆ.

ಬೀದಿಸಾಹಿತ್ಯಕ್ಕೆ ರೈತರ ಕೊಡುಗೆ ಕಡಿಮೆಯಿಲ್ಲ. ಕಬ್ಬು ಹುಲ್ಲು ಗೊಬ್ಬರ ಸಾಗಿಸುವ ಎತ್ತಿನಬಂಡಿ ಅಥವಾ ಟ್ಯಾಕ್ಟರುಗಳ ಮೇಲೆ ಕುಟುಂಬದ ಸದಸ್ಯರ ಹೆಸರುಗಳನ್ನು ಕಾಣಬಹುದು. ಈ ಆಧಾರದಲ್ಲಿ ಸದರಿ ಕುಟುಂಬದ ಗಾತ್ರವನ್ನು ಊಹಿಸಬಹುದು ಮತ್ತು ಊರಿನ ಮತದಾರರ ಪಟ್ಟಿ ತಯಾರಿಸಬಹುದು. ಕೆಲವರ ವಾಹನಗಳಲ್ಲಿ ಪ್ರಿಯವಾದ ಸಿನಿಮಾ ಹಾಡಿನ ಸಾಲು, ಅಭಿಮಾನಿ ನಟರ ಬಿರುದು, ತಮ್ಮ ಜಾತಿಯ ಗುರುತು, ಪ್ರಿಯ ರಾಜಕಾರಣಿಗಳ ಹೆಸರು ರಾರಾಜಿಸುತ್ತಿರುತ್ತವೆ. ಆದರೂ ಕೆಲವರು ತಮ್ಮ ನೆಚ್ಚಿನ ರಾಜಕಾರಣಿಯನ್ನು ಅಪ್ಪ ಎಂದು ಕರೆದುಕೊಳ್ಳುವುದು ಉಚಿತ ಎನಿಸುವುದಿಲ್ಲ. ವಾಹನಗಳ ಮೇಲೆ ಇಷ್ಟದೈವದ ಹೆಸರುಗಳು ಮೆರೆಯುವುದು ಸಹಜ. ಆದರೆ ಈಚೆಗೆ ಇಷ್ಟದೈವಗಳು ಬೇರೆಯವರನ್ನು ಹೆದರಿಸುವಂತೆ ಸಶಸ್ತ್ರರಾಗಿ ಉಗ್ರಮುಖಭಾವದಲ್ಲಿ ಸ್ಟಿಕರಿನ ರೂಪಾಂತರ ಪಡೆದಿವೆ. ನಮ್ಮ ಧರ್ಮಗಳ ಅಸ್ತಿತ್ವ ಪ್ರಕಟವಾಗಬೇಕಾದ್ದು ಅವುಗಳ ಒಳಸತ್ವದಿಂದಲೊ 'ಅನ್ಯ'ಧರ್ಮಕ್ಕೆ ಹಾಕುವ ಗುಟುರುಗಳಿಂದಲೊ?

ಸ್ಥಳೀಯವಾಗಿ ಓಡಾಡುವ ಆಟೊ ಟ್ಯಾಕ್ಟರು ಟೆಂಪೊಗಳ ಮೇಲೆ ಸಾಮಾನ್ಯವಾಗಿ ಕುಟುಂಬಕೇಂದ್ರಿತ ಸಾಹಿತ್ಯವಿರುತ್ತದೆ. ಕರ್ನಾಟಕದ ಆಟೊಗಳಂತೂ ಭಗ್ನಪ್ರೇಮಕಾವ್ಯದ ಸಂಕಲನಗಳು. ಚಾಲಕರು ಹದಿಹರೆಯದಲ್ಲೆ ಪ್ರೇಮದಲ್ಲಿ ಮುಳುಗಿ ಪರೀಕ್ಷೆಯಲ್ಲಿ ಫೇಲಾಗಿ ಆಟೊ ಕೆಲಸಕ್ಕೆ ಇಳಿದರೊ, ಆಟೊ ಚಾಲಕರಾದ್ದರಿಂದ ಹುಡುಗಿಯರು ತಿರಸ್ಕರಿದರೊ, ಅಧ್ಯಯನ ಮಾಡಬೇಕು. 'ಲಾರಿಹಿಂದೆ ಹೋದರೆ ಧೂಳು ಹುಡುಗಿ ಹಿಂದೆ ಹೋದರೆ ಗೋಳು' 'ಪ್ರೀತಿಸಿದವರಿಗೆ ಕೈಕೊಡ್ತಾರೆ ಮೋಸಗಾರರಿಗೆ ಮೈಕೊಡ್ತಾರೆ' ಇತ್ಯಾದಿ ಚರಣಗಳಲ್ಲಿ ಹುಡುಗಿಯರನ್ನು ಕಟಕಟೆಯಲ್ಲಿ ನಿಲ್ಲಿಸಿ, ತಮ್ಮನ್ನೂ ಮುಗ್ಧರೆಂದು ಬಣ್ಣಿಸಿಕೊಂಡಿರುತ್ತಾರೆ. ಪ್ರೇಮಭಗ್ನ ಹಿನ್ನೆಲೆಯಿಲ್ಲದ ಚಾಲಕರು ಮಾತ್ರ ತಮ್ಮ ಆರ್ಥಿಕ ಸ್ಥಿತಿಗತಿ ಕಾಣಿಸಿರುತ್ತಾರೆ. ಅವು ಹಾಯ್ಕುಗಳನ್ನೂ ನಾಚಿಸುತ್ತವೆ. ಒಬ್ಬ ಬರೆದುಕೊಂಡಿದ್ದ: 'ಅಣ್ಣಾ, ಹಿಂದಿಂದ ಗುದ್ದಬೇಡಿ.

ಮುಂದುವರೆಯುವುದು.......

# ಗ್ಯಾರಂಟಿ ಫಲಾನುಭವಿಗಳಲ್ಲಿ ಬಿಜೆಪಿಯವರೇ ಅಧಿಕ

### ಸಿಎಂ ಸಿದ್ದರಾಮಯ್ಯ ಹೇಳಿಕೆ । 59 ಸಾವಿರ ಕೋಟಿ ವಾರ್ಷಿಕ ವೆಚ್ಚ ಮಾಡಿ ಐದಕ್ಕೆ ಐದೂ ಗ್ಯಾರಂಟಿಗಳನ್ನು ಜಾರಿ

■ **ಹಂಪಿ ಟೈಮ್ಸ್ ಬೆಂಗಳೂರು:**

ರಾಜ್ಯದ 4 ಕೋಟಿ 30 ಲಕ್ಷ ಕನ್ನಡಿಗರಿಗೆ ಸರ್ಕಾರದ ಗ್ಯಾರಂಟಿಯ ಫಲ ಪ್ರತೀ ದಿನ–ಪ್ರತೀ ತಿಂಗಳು ತಲುಪುತ್ತಿದೆ. ಈ ಫಲಾನುಭವಿಗಳಲ್ಲಿ ಃಏಕಯವರೇ ಹೆಚ್ಚಿದ್ದಾರೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ನುಡಿದರು.

ಕೆಪಿಸಿಸಿವತಿಯಿಂದ ಇಂದಿರಾಗಾಂಧಿ ಭವನದ ಭಾರತ್ ಜೋಡೋ ಸಭಾಂಗಣದಲ್ಲಿ ನಡೆದ ಪಕ್ಷದ ಮುಖಂಡರ ಮಧ್ಯಾಹ್ನದ ಸಭೆಯಲ್ಲಿ ಮಾತನಾಡಿದರು.

ಪಕ್ಷದ ಕಾರ್ಯಕರ್ತರೇ ನಮ್ಮ ಬೆನ್ನೆಲುಬು. ನಿಮ್ಮ ಹೋರಾಟದಿಂದ ಪಕ್ಷ ಅಧಿಕಾರಕ್ಕೆ ಬಂದಿದೆ. ವಾಮ ಮಾರ್ಗದಲ್ಲಿ ಮೂರೂವರೆ ವರ್ಷ ಅಧಿಕಾರ ನಡೆಸಿದ ಬಿಜೆಪಿ ಮಾಡಬಾರದ್ದನ್ನೆಲ್ಲಾ ಮಾಡಿ ರಾಜ್ಯವನ್ನು ಆರ್ಥಿಕವಾಗಿ ದಿವಾಳಿ ಮಾಡಿದ್ದಾರೆ. ನೀರಾವರಿ ಇಲಾಖೆಯೊಂದರಲ್ಲೇ 13 ಸಾವಿರ ಕೋಟಿಗೂ ಅಧಿಕ ಬಿಲ್ ಬಾಕಿ ಉಳಿಸಿದ್ದಾರೆ.



ಲೋಕೋಪಯೋಗಿ ಇಲಾಖೆಯಲ್ಲಿ 9000 ಕೋಟಿ ಬಿಲ್ ಬಾಕಿ ಉಳಿಸಿದ್ದಾರೆ, ಸಣ್ಣನೀರಾವರಿ ಇಲಾಖೆಯಲ್ಲಿ 2000 ಕೋಟಿ ರೂಪಾಯಿ ಬಿಲ್ ಬಾಕಿ ಉಳಿಸಿದ್ದಾರೆ, ಗ್ರಾಮೀಣಾಭಿವೃದ್ಧಿ ಇಲಾಖೆಯಲ್ಲಿ 6000 ಕೋಟಿ ರೂಪಾಯಿ ಬಿಲ್ ಬಾಕಿ ಉಳಿಸಿದ್ದಾರೆ, ಬೆಂಗಳೂರು ನಗರ 5000 ಕೋಟಿ ಬಿಲ್ ಬಾಕಿ ಉಳಿಸಿದ್ದಾರೆ. ಹೀಗೆ ರಾಜ್ಯವನ್ನು ಹಾಳುಮಾಡಿ, ರಾಜ್ಯದ ಆರ್ಥಿಕತೆಯನ್ನು ಎಕ್ಕುಡಿಸಿ ಹೋಗಿದ್ದಾರೆ. ಇಷ್ಟಾದರೂ ನಾವು 59 ಸಾವಿರ ಕೋಟಿ ವಾರ್ಷಿಕ ವೆಚ್ಚ ಮಾಡಿ ಐದಕ್ಕೆ ಐದೂ ಗ್ಯಾರಂಟಿಗಳನ್ನು ಜಾರಿಗೆ ತಂದಿದ್ದೇವೆ. 4 ಕೋಟಿ 30 ಲಕ್ಷ ಕನ್ನಡಿಗರಿಗೆ ಸರ್ಕಾರದ ಗ್ಯಾರಂಟಿಯ ಫಲ ಪ್ರತೀ ದಿನ , ಪ್ರತೀ ತಿಂಗಳು ತಲುಪುತ್ತಿದೆ. ಇದು ನಿಮ್ಮ ಕಾಂಗ್ರೆಸ್ ಸರ್ಕಾರದ ಸಾಧನೆ. ಇದು ದೇಶದಲ್ಲೇ ಮೊದಲು. ಪ್ರತಿಯೊಬ್ಬ ಕಾರ್ಯಕರ್ತನೂ ಎದೆ ಎತ್ತಿ , ತಲೆ ಎತ್ತಿ ಹೇಳಿ ಎಂದು ಕರೆ ನೀಡಿದರು. ಹೀಗೆ ಬಿಜೆಪಿಯವರು ಚೆನ್ನಾಗಿ ತಿಂದು, ಸಾವಿರಾರು ಕೋಟಿ ಕೆಲಸ ಶುರು ಮಾಡಿಸಿ ಸುಮಾರು 40 ಸಾವಿರ ಕೋಟಿಗೂ ಹೆಚ್ಚು ಬಿಲ್ ಕೊಡದೆ, ಬಿಲ್ ಬಾಕಿ ಉಳಿಸಿ ಮನೆಗೆ ಹೋಗಿದ್ದಾರೆ. ಹೀಗೆ ರಾಜ್ಯವನ್ನು ಆರ್ಥಿಕವಾಗಿ ದಿವಾಳಿ ಮಾಡಿಟ್ಟಿದ್ದಾರೆ. ನಮ್ಮ ಗ್ಯಾರಂಟಿಗಳನ್ನು ಅಣಕಿಸಿ ಈಗ ನಮ್ಮ ಗ್ಯಾರಂಟಿಗಳನ್ನೇ ಕಾಪಿ ಮಾಡಿ ಅದಕ್ಕೆ ಮೋದಿ ಗ್ಯಾರಂಟಿ ಎನ್ನುತ್ತಿದ್ದಾರೆ. ಬಿಜೆಪಿ ಯವರು ಅಷ್ಟು ನಿರ್ಲಜ್ಜರಾಗಿದ್ದಾರೆ ಎಂದರು. ದಯವಿಟ್ಟು ನಿಮ್ಮ ಹೃದಯದ ಮಾತು ಕೇಳಿ.

**ಆಪರೇಷನ್ ಕಮಲದ ರುಚಿ ಹತ್ತಿದೆ**
**ಬಿಜೆಪಿಯವರಿಗೆ ಜನಾದೇಶದ ಸರ್ಕಾರವನ್ನು ಉರುಳಿಸಿ ಅಧಿಕಾರಕ್ಕೆ ಬಂದು ಹಣ ತಿನ್ನುವ ರುಚಿ ಹತ್ತಿದೆ. ಹೀಗಾಗಿ ಮತ್ತೆ ಮತ್ತೆ ಸರ್ಕಾರ ಬೀಳಿಸುವ ಪ್ರಯತ್ನಕ್ಕೆ ಕೈ ಹಾಕುತ್ತಲೇ ಇರುತ್ತಾರೆ ಎಂದು ಇದೇ ಸಂದರ್ಭದಲ್ಲಿ ಮುಖ್ಯಮಂತ್ರಿಗಳು ಕಾರ್ಯಕರ್ತರನ್ನು ಎಚ್ಚರಿಸಿದರು.**

ಸರ್ಕಾರದ ಕೆಲಸಗಳನ್ನು ಪ್ರತಿ ಮನೆಗೆ ತಲುಪಿಸಿ ಲೋಕಸಭಾ ಚುನಾವಣೆಯಲ್ಲಿ ಬಿಜೆಪಿಯವರ ಸುಳ್ಳನ್ನು ಸೋಲಿಸಿ ನಮ್ಮ ಸಾಧನೆಗಳನ್ನು ಎತ್ತಿ ಹಿಡಿಯುವ ಮೂಲಕ 28 ಲೋಕಸಭಾ ಸ್ಥಾನಗಳಲ್ಲಿ ಗೆಲ್ಲಿಸಿ ಎಂದು ಕಾರ್ಯಕರ್ತರಿಗೆ ಮುಖ್ಯಮಂತ್ರಿಗಳು ಕೈ ಮುಗಿದು ಕರೆ ನೀಡಿದರು

ಕೆಪಿಸಿಸಿ ಅಧ್ಯಕ್ಷರಾದ ಡಿ.ಕೆ.ಶಿವಕುಮಾರ್, ಕಾರ್ಯಾಧ್ಯಕ್ಷರಾದ ಸಲೀಂ ಅಹಮದ್ ಸೇರಿ ಹಲವು ಮುಖಂಡರು ವೇದಿಕೆಯಲ್ಲಿದ್ದರು.

## ನೀವೂ ಬರೆಯಬಹುದು

ಹಂಪಿ ಟೈಮ್ಸ್ ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಛೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣಿಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು. ಈ ನಿಟ್ಟಿನಲ್ಲಿ ನಿಮ್ಮಿಂದ ಕತೆ, ಕವನ, ವಿವಿಧ ಪ್ರಕಾರದ ಸಾಹಿತ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಪರ ಚಿಂತನೆ ಒಳಗೊಂಡ ಲೇಖನಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಜೊತೆಗೆ ಬಹುಮುಖ್ಯವಾಗಿ ಈ ನೆಲದ ಜನರ ಧ್ವನಿಯಾಗುವ ಹಂಬಲದಿಂದ ಸಾರ್ವಜನಿಕ ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದು. ಓದುಗ ಪ್ರಭುಗಳಾದ ನೀವು ಪತ್ರಿಕೆಯ ಭಾಗವೂ ಹೌದು. ಹೀಗಾಗಿ ನಿಮ್ಮ ಪ್ರತಿಕ್ರಿಯೆಯೂ ನಮಗೆ ಅತ್ಯಮೂಲ್ಯ. **ಕಥೆ, ಕವನ, ಸಾಹಿತ್ಯ, ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಕ್ರೀಡೆ, ಕೃಷಿ, ಅಪರೂಪದ ವ್ಯಕ್ತಿಗಳು, ಅಂಕಣ, ಮಹಿಳೆ ಮತ್ತು ಮಕ್ಕಳು ಸೇರಿದಂತೆ ವಿವಿಧ ಕ್ಷೇತ್ರಗಳ** ಕುರಿತಾದ ನಿಮ್ಮ ಬರಹಗಳನ್ನೆಲ್ಲ ಸ್ವೀಕರಿಸುತ್ತೇವೆ ಆದರೆ, ಕಳುಹಿಸಿದ ಬರಹಗಳಲ್ಲಿ ಸಮಂಜಸ ಎನಿಸುವುದಷ್ಟೇ ಪ್ರಕಟಿಸುತ್ತೇವೆ. ನಮ್ಮ ನಂಬುಗೆಯ ಸಮಾಜಕ್ಕಾಗಿ ಒಳಿತನ್ನೇ ಬಯಸುತ್ತ, ಬರೆಯುತ್ತ ಎಲ್ಲರೂ ಒಳ ಗೊಳ್ಳೋಣ.

ಸಂಪಾದಕರು

**ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.**
ಇ–ಮೇಲ್:hampitimes@gmail.com
M: 9448633038

ಹಂಪಿ ಟೈಮ್ಸ್
HAMPI TIMES

ಗುರುವಾರ / Thursday 11.01.2024



**ಕವಿ ಮನಸು**

## ಮತ್ತೆ ಮರಳುವರೇ ಮಣ್ಣಾದವರು

ಮಸಣದ ಮಂದಿರದಿ ಕುಳಿತುಕೊಂಡೆ
ಮಣ್ಣಲ್ಲಿ ಮರೆಯಾದವರ ನೆನೆದುಕೊಂಡೆ
ಅವರ ಜೊತೆಯಲಿ ಮಾತನಾಡಬೇಕೆಂದೆ
ಮಾತನಾಡದೆ ಮೌನದಲ್ಲಿ ಓಡಿ ಬಂದೆ

ಮರೆಯಾದವರ ಮಾತು ಸಿಡುಕು ಆಗಿತ್ತು
ಇರುವಾಗ ಮಾತಿಲ್ಲ ಬಂದೆ ಏಕೆ ಇವತ್ತು
ಹಸಿವಾದಾಗ ಹಾಕಲಿಲ್ಲ ಹಿಡಿ ಅನ್ನದ ತುತ್ತು
ಬಾಯಾರಿಕೆಗೆ ನೀರ ಕೊಡಲಿಲ್ಲ ಆವತ್ತು

ಬದುಕಿರುವಾಗ ನಿಮ್ಮದೇ ಗಾಂಭೀರ್ಯ
ಅರಿಯಲಿಲ್ಲ ಯಾರೂ ನಮ್ಮ ಆಂತರ್ಯ
ಹೇಳ ಹೋದರೆ ಅಡ್ಡ ವಯೋ ಅಂತರ
ತಿಳಿದಿದೆಯೇ ನಿಮಗೆ ನನ್ನ ಕಾಲಾನಂತರ?

ನೀ ಹುಟ್ಟಿದ ಜಗವಿದು ಶಾಶ್ವತವಲ್ಲ
ಎಂದಾದರೊಂದು ದಿನ ಹೋಗಬೇಕಲ್ಲ
ಹುಟ್ಟುವ ದಿನ ಗೊತ್ತು ಸಾವು ಗೊತ್ತಿಲ್ಲ
ಗೊತ್ತಾದರೆ ದೇವನ ಅಸ್ತಿತ್ವವೇ ಇಲ್ಲಿಲ್ಲ


ಹರೆಯದಾಗ ಹೆಂಡತಿ ಮಕ್ಕಳ ಮೋಹ
ಅತೀ ಆಸೆಯೊಡಗೂಡಿ ಸಂಪತ್ತು ದಾಹ
ಹಿರಿಯರೊಡನೆ ಮಾಡಿದಿರಿ ಸದಾ ಕಲಹ
ಅರಿವು ಅರಿವುದರೊಳಗೆ ನಿಮಗೆ ವಿರಹ

ಹಿರಿಯರಿಲ್ಲದ ಮನೆಯು ದೇವರಿಲ್ಲದ ಗುಡಿಯು
ಹಿರಿಯರ ಮಾತಿನಲಿ ಇರುವುದು ಅನುಭವವು
ಇಂದಿನ ಪೀಳಿಗೆಗೆ ಹಿರಿಮಾತು ಕಿರಿಕಿರಿಯು
ಮತ್ತೆ ಮರಳುವರೇ ಮಸಣದಲಿ ಮಣ್ಣಾದವರು

– ಕೆ ಎಂ ಬಸವರಾಜ
ನಿವೃತ್ತ ಇಂಜನೀರ್, ಹೊಸಪೇಟೆ




**ತುಂಗಭದ್ರಾ ನೀರಿನ ಮಟ್ಟ**



| ಬುಧವಾರ : 10-01-2024 | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1588.99 ಅಡಿ |
| ಒಳ ಹರಿವು | 00 ಕ್ಯುಸೆಕ್ |
| ಹೊರ ಹರಿವು | 00 ಕ್ಯುಸೆಕ್ |
| ಇಂದಿನ ಸಾಮರ್ಥ್ಯ | 10.205 ಟಿಎಂಸಿ |
| ಗರಿಷ್ಠ ಸಾಮರ್ಥ್ಯ | 105.788 ಟಿಎಂಸಿ |
| **ಕಳೆದ ವರ್ಷ ಇದೇ ದಿನ** | |
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1622.45 ಅಡಿ |
| ಒಳ ಹರಿವು | 00 ಕ್ಯುಸೆಕ್ |
| ಹೊರ ಹರಿವು | 8493 ಕ್ಯುಸೆಕ್ |
| ಸಾಮರ್ಥ್ಯ | 68.473 ಟಿಎಂಸಿ |

**ಓದುಗರ ಗಮನಕ್ಕೆ**

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
– ಜಾಹೀರಾತು ವ್ಯವಸ್ಥಾಪಕರು.

# ಕನ್ನಡದ ದೇಸಿ ಪ್ರಜ್ಞೆ ಹೆಚ್ಚಲಿ

**ಕನ್ನಡ ವಿಶ್ವವಿದ್ಯಾಲಯದದ ನುಡಿಹಬ್ಬ 32ನೇ ಘಟಿಕೋತ್ಸವದಲ್ಲಿ ಕುಲಪತಿ ಡಾ.ಡಿ.ವಿ.ಪರಮಶಿವಮೂರ್ತಿ ಹೇಳಿಕೆ**



ಕನ್ನಡ ವಿವಿ ಕುಲಪತಿ ಡಾ.ಡಿ.ವಿ.ಪರಮಶಿವಮೂರ್ತಿ ಮಾತನಾಡಿ, ಸಂಶೋಧನೆಗಾಗಿಯೇ ಸ್ಥಾಪಿತವಾದ ದೇಶದ ಏಕೈಕ ವಿಶ್ವವಿದ್ಯಾಲಯ ಕನ್ನಡ ವಿಶ್ವವಿದ್ಯಾಲಯವು ಸ್ಥಾಪನೆಯಾಗಿ 33 ವರ್ಷಗಳು ಪೂರ್ಣಗೊಂಡಿವೆ. ಕನ್ನಡ ನಾಡು–ನುಡಿ, ಚರಿತ್ರೆ–ಸಂಸ್ಕೃತಿಯ ಅಧ್ಯಯನ ಮತ್ತು ಸಂಶೋಧನೆಯನ್ನೇ ತನ್ನ ಉಸಿರನ್ನಾಗಿಸಿಕೊಂಡಿರುವ ಕನ್ನಡ ವಿಶ್ವವಿದ್ಯಾಲಯವು ನಿರಂತರವಾಗಿ ಕನ್ನಡ ಭಾಷೆ, ಸಾಹಿತ್ಯ ಹಾಗೂ ಸಂಸ್ಕೃತಿ ಪರವಾದ ಚಿಂತನೆಗಳನ್ನು ವಿಶಿಷ್ಟವಾಗಿ ನಡೆಸಿಕೊಂಡು ಬಂದಿದೆ. ಕನ್ನಡ ದೇಶಿ ಸಂಸ್ಕೃತಿಯನ್ನು ಶೋಧಿಸುವ, ಅದನ್ನು ಕಾಪಿಡುವ ನಿಟ್ಟಿನಲ್ಲಿ ವಿಶ್ವವಿದ್ಯಾಲಯವು ನಿರಂತರವಾಗಿ ಯೋಚಿಸುತ್ತ ಬಂದಿದೆ. ವಿಜ್ಞಾನ ಮತ್ತು ತಂತ್ರಜ್ಞಾನದ ನಾಗಾಲೋಟದ ಪ್ರಭಾವಿಕೆಯ ನಡುವೆ ನಲುಗುತ್ತಿರುವ ಕನ್ನಡದ ದೇಸಿ ಪ್ರಜ್ಞೆಯನ್ನು ಅವುಗಳ ಜೊತೆಜೊತೆಯಲ್ಲಿಯೇ ಸಾಗುವ ಮತ್ತು ಉಳಿಯುವ ನಿಟ್ಟಿನಲ್ಲಿ ತೀವ್ರಗತಿಯಲ್ಲಿ ಕ್ರಮವಹಿಸಬೇಕಾಗಿದೆ. ಈ ನಿಟ್ಟಿನಲ್ಲಿ ಕನ್ನಡ ವಿಶ್ವವಿದ್ಯಾಲಯ ಅನೇಕ ಕಾರ್ಯ ಯೋಜನೆಗಳನ್ನು ರೂಪಿಸಿಕೊಂಡು ಕಾರ್ಯಪ್ರವೃತ್ತವಾಗಿದೆ. ಹಳತು ಮತ್ತು ಹೊಸದರ ಸಂಗಮವಾಗಬೇಕಿದೆ. ಹಲವು ರೀತಿಯ ಕನ್ನಡಗಳ ಸೊಗಡನ್ನು ಮುಂದಿನ ತಲೆಮಾರಿಗೂ ಕಾಪಾಡುವ ಹೊಣೆಗಾರಿಕೆ ನಮ್ಮ ಮೇಲಿದೆ. ವಿಜ್ಞಾನ, ತಂತ್ರಜ್ಞಾನ, ವೃತ್ತಿಪರ ಪದವಿಗಳ ಪಠ್ಯಗಳು ಕನ್ನಡ ಭಾಷೆಯಲ್ಲಿ ಪ್ರಕಟವಾಗಬೇಕಿದೆ. ಆ ಮೂಲಕ ವಿದ್ಯಾರ್ಥಿಗಳಲ್ಲಿ ಮಾತೃಭಾಷೆಯ ಮುಖಾಂತರ ಅರ್ಥೈಸಿಕೊಳ್ಳಬಹುದಾದ ಸೌಲಭ್ಯವನ್ನು ಒದಗಿಸಬೇಕಿದೆ. ಕನ್ನಡ ಮಾಧ್ಯಮದಲ್ಲಿ ಅಧ್ಯಯನ ಮಾಡಿದ ವಿದ್ಯಾರ್ಥಿಗಳಲ್ಲಿ ತಮ್ಮ ಪ್ರತಿಭೆಯನ್ನು ಉನ್ನತ ಮಟ್ಟಕ್ಕೆ ಮುಟ್ಟಿಸುವ ಆತ್ಮಸ್ಥೈರ್ಯವನ್ನು ಮೂಡಿಸಬೇಕಾಗಿದೆ. ಶಿಕ್ಷಣ ಸಂಸ್ಥೆಗಳು, ಶಿಕ್ಷಣ ತಜ್ಞರು ಮತ್ತು ಸರ್ಕಾರ ಒಟ್ಟಾಗಿ ಕುಳಿತು ಯೋಜನೆಗಳನ್ನು ರೂಪಿಸಬೇಕಿದೆ.

ವಿಭಾಗದ ಸಾಂಸ್ಥಿಕ ಯೋಜನೆಯಾಗಿ 'ಹಸ್ತಪ್ರತಿ ಸರ್ವೇಕ್ಷಣೆ–ಸಂಗ್ರಹ–ಸೂಚಿ ರಚನೆ ಹಾಗೂ ಪ್ರಕಟಣೆಯನ್ನು ನಿರಂತರವಾಗಿ ಹಮ್ಮಿಕೊಳ್ಳಲಾಗಿದೆ. ವೈಯಕ್ತಿಕ ಯೋಜನೆಯಾಗಿ ಡಾ.ವೀರೇಶ ಬಡಿಗೇರ ಅವರು 'ತಿಂತಿಣಿ ಮೌನೇಶ್ವರರ ವಚನಗಳ ಮೀಮಾಂಸೆ', ಡಾ.ಎಫ್.ಟಿ.ಹಳ್ಳಿಕೇರಿ ಅವರು 'ಸಪ್ತಕಾವ್ಯದ ಗುರುಬಸವನ ಸಮಗ್ರ ಸಾಹಿತ್ಯ(ಪರಿಷ್ಕರಣೆ), ಡಾ.ಕೆ.ರವೀಂದ್ರನಾಥ ಅವರು 'ಸಿದ್ಧನಂಜೇಶನ ಗುರುರಾಜ ಚಾರಿತ್ರ್ಯ(ಪರಿಷ್ಕರಣೆ), ಡಾ.ಎಸ್.ಆರ್.ಚನ್ನವೀರಪ್ಪ ಅವರು 'ಆದ್ರೀಶ ಕವಿಯ ಪ್ರೌಢರಾಯನ ಕಾವ್ಯ(ಪರಿಷ್ಕರಣೆ) ಯೋಜನೆಗಳನ್ನು ಹಮ್ಮಿಕೊಳ್ಳಲಾಗಿದೆ. ಇದಲ್ಲದೆ ಇಷ್ಟರಲ್ಲೇ ಹತ್ತು ಜನ ಬಾಹ್ಯ ವಿದ್ವಾಂಸರಿಂದ ಹಸ್ತಪ್ರತಿ ಮತ್ತು ಗ್ರಂಥ ಸಂಪಾದನಾ ಕ್ಷೇತ್ರಕ್ಕೆ ಸಂಬಂಧಿಸಿದ ಹತ್ತು ಕೃತಿಗಳನ್ನು ಪ್ರಕಟಿಸುತ್ತಿದೆ. ಕನ್ನಡ ವಿಶ್ವವಿದ್ಯಾಲಯದ ಅಭಿವೃದ್ಧಿ ಕಾರ್ಯಗಳಲ್ಲಿ ಮುಖ್ಯಮಂತ್ರಿಗಳ ವಿವೇಚನಾ ನಿಧಿ ಅಡಿಯಲ್ಲಿ ಕಲ್ಯಾಣ ಕರ್ನಾಟಕ ಪ್ರಾದೇಶಾಭಿವೃದ್ಧಿ ಮಂಡಳಿಯ ಮೂಲಕ ರೂ.19 ಕೋಟಿ 85 ಲಕ್ಷಗಳ ವಿವಿಧ ಮೂಲಭೂತ ಸೌಕರ್ಯಗಳ ಕಾಮಗಾರಿಗಳನ್ನು ಪ್ರಾರಂಭಿಸಲಾಗಿದೆ. 1.5 ಕೋಟಿ ಲೀಟರ್ ನೀರು ಸಂಗ್ರಹಗಾರ, 9 ಕೋಟಿ 85 ಲಕ್ಷಗಳ ವಿವಿಧ ಮೂಲಭೂತ ಸೌಕರ್ಯಗಳ ಕಾಮಗಾರಿ ಗಳನ್ನು ಪ್ರಾರಂಭಿಸಲಾಗಿದೆ. 9 ಲಕ್ಷ ಲೀಟರ್‌ಗಳ ಸಾಮರ್ಥ್ಯವುಳ್ಳ ನೀರು ವಿತರಣಾ ಟ್ಯಾಂಕ್ ನಿರ್ಮಾಣ, ಶಿಲ್ಪವನ ವೀಕ್ಷಣೆಗಾಗಿ ಪ್ರವಾಸಿಗರಿಗೆ ಕೊಬಲ್ ಸ್ಟೋನ್ ಪಾತ್‌ವೇ ನಿರ್ಮಾಣ, ವಿದ್ಯಾರಣ್ಯ ಆವರಣದ ರಸ್ತೆ ಕಾಮಗಾರಿ ಮತ್ತು ಡಾಂಬರೀಕರಣ, ಹೈಮಾಸ್ಟ್ ದೀಪ ಅಳವಡಿಕೆ, ಪ್ರಸಾರಾಂಗದ ನೂತನ ಕಟ್ಟಡ ನಿರ್ಮಾಣ, ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ವಿದ್ಯಾರ್ಥಿ ವಸತಿ ನಿಲಯಗಳಿಗೆ ಕಾಂಪೌಂಡ್ ಗೋಡೆ ನಿರ್ಮಾಣದಂಥ ಕಾಮಗಾರಿಗಳು ಪ್ರಗತಿಯಲ್ಲಿವೆ. 2 ಕೋಟಿ ರೂ.ವೆಚ್ಚದಲ್ಲಿ ಸುಸಜ್ಜಿತ ಒಳಾಂಗಣ ಕ್ರೀಡಾಂಗಣ ನಿರ್ಮಿಸಲು ಜಿಲ್ಲಾ ಖನಿಜ ನಿಧಿಯಿಂದ ಕಾಮಗಾರಿ ಮಂಜೂರಾಗಿದ್ದು, ಇಷ್ಟರಲ್ಲಿಯೇ ಪ್ರಾರಂಭಿಸಲಾಗುವುದು.

ಹೀಗೆ ಕನ್ನಡ ವಿಶ್ವವಿದ್ಯಾಲಯವು ಕನ್ನಡದ ಅರಿವನ್ನು ವಿಸ್ತರಿಸುವ, ಕನ್ನಡದ ಅಧ್ಯಯನಕ್ಕೆ ಆಕರಗಳನ್ನು ನಿರ್ಮಿಸುವ, ಅಧ್ಯಯನದ ಹೊಸಹೊಸ ವಿಧಾನಗಳನ್ನು ರೂಪಿಸುವ ಜೊತೆಜೊತೆಯಲ್ಲಿಯೇ ಸಮಾಜದ ಹಿತಚಿಂತನೆಯ ಭಾಗವಾಗಿ ಸುತ್ತಲಿನ ಐದು ಗ್ರಾಮಗಳನ್ನು ದತ್ತು ಪಡೆದು ಅವುಗಳಲ್ಲಿ ಆರೋಗ್ಯ, ಸ್ವಚ್ಛತೆ ಮತ್ತು ಶಿಕ್ಷಣದ ಮಹತ್ವದ ಬಗ್ಗೆ ಅರಿವನ್ನು ಮೂಡಿಸುವ ಕೆಲಸ ಮಾಡುವ ಮೂಲಕ ಕನ್ನಡವನ್ನು ಕಟ್ಟುವ ಕ್ರಿಯೆಯಲ್ಲಿ ತೊಡಗಿಸಿಕೊಂಡಿದೆ ಇಲ್ಲಿ ಯಾವುದಕ್ಕೂ ಮೊದಲಿಲ್ಲ, ಯಾವುದಕ್ಕೂ ತುದಿಯಿಲ್ಲ ಎಂದರು.



## ನಾಡೋಜ ಪದವಿ ಪ್ರದಾನ

**ಮೊದಲ ಪುಟದಿಂದ**

ಮೊದಲ ಪುಟದಿಂದ

ಕಾಂಚೀಪುರಂ ಮುಂತಾದ ವಿಶ್ವವಿದ್ಯಾಲಯಗಳು ಇವರಿಗೆ ಗೌರವ ಡಾಕ್ಟರ್ ಆಫ್ ಸೈನ್ಸ್ ಪದವಿ ನೀಡಿ ಪುಸ್ಕರಿಸಿವೆ. ನಾಡಿನ ಬೇರೆಬೇರೆ 27ಕ್ಕೂ ಹೆಚ್ಚು ವಿಶ್ವವಿದ್ಯಾಲಯಗಳ ಘಟಿಕೋತ್ಸವದಲ್ಲಿ ಪಾಲ್ಗೊಂಡು ಯುವ ಮನಸ್ಸುಗಳಿಗೆ ಭಾರತೀಯ ಸಂಸ್ಕೃತಿ, ಪರಂಪರೆ, ಶಿಕ್ಷಣ ಹಾಗೂ ತಾಂತ್ರಿಕ ವಿಷಯವನ್ನೊಳಗೊಂಡ ಘಟಿಕೋತ್ಸವ ಭಾಷಣ ಮಾಡಿರುವುದು ಇವರ ಹೆಗ್ಗಳಿಕೆಯಾಗಿದೆ. ಪ್ರೊ. ಎಸ್.ಸಿ. ಶರ್ಮಾ ಅವರ ವಿಜ್ಞಾನ ಹಾಗೂ ತಂತ್ರಜ್ಞಾನದ ಈ ಎಲ್ಲಾ ಸಾಧನೆಗಳನ್ನು ಪುರಸ್ಕರಿಸಿ ಕನ್ನಡ ವಿಶ್ವವಿದ್ಯಾಲಯವು 32ನೇ ನುಡಿಹಬ್ಬದಲ್ಲಿ ಪ್ರತಿಷ್ಠಿತ 'ನಾಡೋಜ' ಗೌರವ ಪದವಿಯನ್ನು ನೀಡಿ ಗೌರವಿಸಿದೆ. ಕುಲ ಸಚಿವರಾದ ಡಾ.ವಿಜಯ ಪೂಣಚ್ಚ ತಂಬಂಡ ವಂದಿಸಿದರು. ಇತಿಹಾಸ ಮತ್ತು ಪುರಾತತ್ವ ಇಲಾಖೆಯ ಪ್ರಾಧ್ಯಾಪಕರಾದ ಡಾ.ಎಸ್.ವೈ.ಸೋಮಶೇಖರ ನಿರೂಪಿಸಿದರು.

## ದೇಸಿ ಮಾದರಿಯ ಸಂಶೋಧನೆಗೆ ವಿಶಿಷ್ಠ

**ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋಟ್ ಅಭಿಮತ**



ಹಂಪಿ ತನ್ನ ಐತಿಹಾಸಿಕ ಪರಂಪರೆಗೆ ಹೆಸರುವಾಸಿಯಾಗಿದ್ದರೆ, ಹಂಪಿ ಪರಿಸರದಲ್ಲಿ ಸ್ಥಾಪಿಸಲಾದ ಕನ್ನಡ ವಿಶ್ವವಿದ್ಯಾಲಯವು ತನ್ನ ದೇಸಿ ಮಾದರಿಯ ಸಂಶೋಧನೆಗೆ ವಿಶಿಷ್ಟವಾಗಿದೆ. ಕನ್ನಡ ವಿಶ್ವವಿದ್ಯಾಲಯದ ಸಂಸ್ಥಾಪಕ ಉಪಕುಲಪತಿ ಡಾ.ಚಂದ್ರಶೇಖರ ಕಂಬಾರ ಅವರು ವಿಶ್ವವಿದ್ಯಾಲಯದ ಉತ್ತಮ ಶೈಕ್ಷಣಿಕ ಚಟುವಟಿಕೆಗಳಿಗೆ ಭದ್ರ ಬುನಾದಿ ಹಾಕಿದ್ದಾರೆ. ವಿಶ್ವವಿದ್ಯಾನಿಲಯದ ಹಸ್ತಪ್ರತಿ ಭಂಡಾರದಲ್ಲಿ ಸುಮಾರು ಐದು ಸಾವಿರ ಅಪರೂಪದ ಹಸ್ತಪ್ರತಿಗಳ ಸಂಗ್ರಹವಿರುವುದು ಅತ್ಯಂತ ಹೆಮ್ಮೆಯ ಸಂಗತಿ. ಪ್ರಸಾರಾಂಗವು ಕನ್ನಡವಲ್ಲದೆ ಹಿಂದಿ ಮತ್ತು ಇಂಗ್ಲಿಷ್ ಭಾಷೆಯ ಕೆಲವು ಮೌಲ್ಯಯುತ ಪುಸ್ತಕಗಳನ್ನು ಪ್ರಕಟಿಸಿದೆ ಎಂದು ತಿಳಿದು ಸಂತೋಷವಾಯಿತು. ರಾಷ್ಟ್ರ ಮತ್ತು ಅಂತರಾಷ್ಟ್ರೀಯ ಮಟ್ಟದಲ್ಲಿ ಕನ್ನಡದ ಜ್ಞಾನವನ್ನು ಪಸರಿಸಲು ಹಿಂದಿ ಮತ್ತು ಇಂಗ್ಲಿಷ್ ಭಾಷೆಗಳಲ್ಲಿ ಕನ್ನಡದ ಹೆಚ್ಚು ಮೌಲ್ಯಯುತ ಪುಸ್ತಕಗಳನ್ನು ಪ್ರಕಟಿಸುವ ಅಗತ್ಯವಿದೆ.

ಸಾಂಪ್ರದಾಯಿಕ ವಿಶ್ವವಿದ್ಯಾನಿಲಯದ ಘಟಿಕೋತ್ಸವಗಳಿಗಿಂತ ಭಿನ್ನವಾಗಿ, ಕನ್ನಡ ವಿಶ್ವವಿದ್ಯಾಲಯದ 'ನುಡಿಹಬ್ಬ' ನಮ್ಮ ದೇಸಿ ಪರಂಪರೆಯನ್ನು ಪ್ರತಿಬಿಂಬಿಸುತ್ತದೆ. ವಿಶ್ವವಿದ್ಯಾನಿಲಯದ 32ನೇ ಘಟಿಕೋತ್ಸವದಲ್ಲಿ ನಾಡೋಜ ಗೌರವ ಪದವಿ ಪಡೆದ ಸಾಧಕರಿಗೆ, ವಿವಿಧ ಪರೀಕ್ಷೆಗಳಲ್ಲಿ ಉತ್ತೀರ್ಣರಾದ ಪದವೀಧರರಿಗೆ ಅವರ ಅನುಪಸ್ಥಿತಿಯಲ್ಲೂ ಹೃತ್ಪೂರ್ವಕ ಅಭಿನಂದನೆಗಳನ್ನು ತಿಳಿಸಿದ್ದಾರೆ.

## ಕನ್ನಡ ವಿವಿ ಸಂಶೋಧನೆಗಳು ಸರ್ವರಿಗೂ ನೆರವು

**ಕೇಂದ್ರೀಯ ವಿವಿ ಕುಲಪತಿ ಡಾ.ಎಸ್.ಎ.ಕೋರಿ ಅಭಿಮತ**



ಆಂಧ್ರ ಪ್ರದೇಶದ ಅನಂತಪುರ ಕೇಂದ್ರೀಯ ವಿಶ್ವವಿದ್ಯಾಲಯ ಕುಲಪತಿ ಡಾ.ಎಸ್.ಎ.ಕೋರಿ ಅವರು 32ನೇ ನುಡಿಹಬ್ಬವನ್ನು ಬುಧವಾರ ಉದ್ಘಾಟಿಸಿ ಮಾತನಾಡಿದರು. ಕಲೆ, ಧರ್ಮ, ಸಂಸ್ಕೃತಿಗಳ ತೊಟ್ಟಿಲಾದ ಯುನೆಸ್ಕೋ ವಿಶ್ವ ಪಾರಂಪರಿಕ ತಾಣವಾದ ಅಂದಿನ ವಿಜಯನಗರ ಸಾಮ್ರಾಜ್ಯದ ರಾಜಧಾನಿಯಾಗಿದ್ದ ಹಂಪಿಯು ಸಂಸ್ಕೃತ, ತೆಲುಗು, ತಮಿಳು ಮತ್ತು ಕನ್ನಡ ಸಾಹಿತ್ಯ ಕ್ಷೇತ್ರಗಳಿಗೆ ಮಹತ್ತರ ಕೊಡುಗೆ ನೀಡಿದೆ.

ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ನೂತನ ಯುಗಪ್ರವರ್ತಕರಾದ ಹರಿಹರ–ರಾಘವಾಂಕರೇ ಮೊದಲಾದ ಕವಿಗಳು; ಪುರಂದರದಾಸರು, ಕನಕದಾಸರೇ ಮೊದಲಾದ ದಾರ್ಶನಿಕ ಕೀರ್ತನಕಾರರು ತಮ್ಮ ಸಾಹಿತ್ಯಕೃಷಿಯನ್ನು ಗೈದ; ದೈವಭಕ್ತಿಗಳನ್ನು ನಾಡಿನ ತುಂಬಾ ಪಸರಿಸಿದ ಜಾಗೃತಕ್ಷೇತ್ರ ಹಂಪಿಯಾಗಿದೆ. ಇಂಥ ಶ್ರೇಷ್ಠ ಸಾಹಿತ್ಯಕ ಪರಂಪರೆಯನ್ನು ಉಳಿಸಿ–ಬೆಳೆಸಿಕೊಂಡು ಹೋಗಲು 1991ರಲ್ಲಿ ಕನ್ನಡ ವಿಶ್ವವಿದ್ಯಾಲಯವು ಸ್ಥಾಪಿತವಾಗುವ ಮೂಲಕ ಪ್ರಪಂಚದಲ್ಲಿ ಭಾಷೆಗಾಗಿಯೇ ಸಂಸ್ಥಾಪಿತವಾದ ಏಕೈಕ ವಿಶ್ವವಿದ್ಯಾಲಯವೆಂಬ ಖ್ಯಾತಿಗೆ ಪಾತ್ರವಾಯಿತು. ಕನ್ನಡಕ್ಕೆ 8ನೇ ಜ್ಞಾನಪೀಠ ಪ್ರಶಸ್ತಿಯನ್ನು ತಂದುಕೊಟ್ಟ ಸಾಹಿತ್ಯ, ಸಿನಿಮಾ, ರಂಗಭೂಮಿ, ಸಂಗೀತ, ಜಾನಪದ, ಅಧ್ಯಾಪನ, ಆಡಳಿತ ಹೀಗೆ ವಿವಿಧಮುಖೀ ವಿದ್ವಾಂಸರಾದ ಡಾ. ಚಂದ್ರಶೇಖರ ಕಂಬಾರರು ಹಂಪಿ, ಕನ್ನಡ ವಿಶ್ವವಿದ್ಯಾಲಯದ ಮೊದಲ ಕುಲಪತಿಗಳಾಗಿ ಭದ್ರಬುನಾದಿಯನ್ನು ಹಾಕಿದ್ದಾರೆ. ತದನಂತರವೂ ಸಹ ಈ ವಿಶ್ವವಿದ್ಯಾಲಯದ ಚುಕ್ಕಾಣಿಯನ್ನು ಕನ್ನಡ ಸಾರಸ್ವತ ಲೋಕದ ದಿಗ್ಗಜರು ಹಿಡಿದು ಮುನ್ನಡೆಸಿದ್ದಾರೆ. ಸಾಹಿತ್ಯ ಮತ್ತು ಸಂಶೋಧನಾ ಕ್ಷೇತ್ರಕ್ಕೆ ಅಮೂಲ್ಯ ಕೊಡುಗೆಯನ್ನು ವಿಶ್ವವಿದ್ಯಾಲಯ ನೀಡುವಂತಾಗಲು ಶ್ರಮಿಸಿದ್ದಾರೆ. ಕನ್ನಡ ಸಾಹಿತ್ಯ ಸಾಂಸ್ಕೃತಿಕ ಲೋಕಕ್ಕೆ, ಕನ್ನಡ ನಾಡಿಗೆ ವಿಶೇಷ ಕಾಣಿಕೆಯನ್ನು ಕೊಟ್ಟ ಧೀಮಂತರನ್ನು ಗುರುತಿಸಿ 'ನಾಡೋಜ' ಪ್ರಶಸ್ತಿಯನ್ನು ನೀಡಿ ಗೌರವಿಸುವ ಪರಿಪಾಟವನ್ನು ವಿಶ್ವವಿದ್ಯಾಲಯವು 1995ರಿಂದ ಮುಂದುವರೆಸಿ ಕೊಂಡು ಬಂದಿದ್ದು, ಇದುವರೆಗೆ 90ಕ್ಕೂ ಅಧಿಕ ಸಾಧಕರು ಈ ಗೌರವವನ್ನು ಸ್ವೀಕರಿಸಿದ್ದಾರೆ.

ಕನ್ನಡ ವಿಶ್ವವಿದ್ಯಾಲಯದ ಮುಖ್ಯ ಉದ್ದೇಶ ಸಂಶೋಧನೆಗೆ ಒತ್ತು ನೀಡುವುದಾಗಿದ್ದು, ಆ ಸಂಶೋಧನೆಗಳನ್ನು ಪ್ರಕಟಿಸುವುದಕ್ಕೂ ಅಷ್ಟೇ ಮಹತ್ವವನ್ನು ನೀಡಿದೆ. ವಿದ್ಯೆಯ ಸೃಷ್ಟಿ ಕನ್ನಡ ವಿಶ್ವವಿದ್ಯಾಲಯದ ಒಂದು ಪ್ರಮುಖ ಗುರಿ. ವಿದ್ಯೆಯ ಸೃಷ್ಟಿಗೆ ಪೂರಕವಾದ ಹಲವು ಬಗೆಯ ಜ್ಞಾನವಾಹಿನಿಗಳ ತಿಳುವಳಿಕೆ ವಿಶ್ವವಿದ್ಯಾಲಯದ ಒಳಗೆ ರೂಪುಗೊಳ್ಳುತ್ತಿದೆ. ಕನ್ನಡ ಸಂಶೋಧನೆಯ ನಿರ್ದಿಷ್ಟ ವಿಧಿ ವಿಧಾನಗಳನ್ನು ಸೃಷ್ಟಿಸುವ ಪ್ರಯತ್ನ ಇಲ್ಲಿ ನಡೆಯುತ್ತಿದೆ. ಇತಿಹಾಸದ ಹಲವು ಕಾಲಘಟ್ಟಗಳಲ್ಲಿ ನಡೆದಿರಬಹುದಾದ ಸಾಂಸ್ಕೃತಿಕ ಸಂಘರ್ಷಗಳ ಕಡೆಗೆ ಗಮನಹರಿಸಿ ಪರಂಪರಾಗತ ಆರೋಗ್ಯಕರ ಮೌಲ್ಯಗಳನ್ನು ಪುನರ್‌ಸ್ಥಾಪಿಸುವ ಕಾರ್ಯವು ಇಂದು ನಡೆಯಬೇಕಾಗಿದೆ. ಇವತ್ತು ನಾವು ಬದುಕುತ್ತಿರುವುದೇ ನಿಜವೆಂಬ ಭ್ರಮೆಗೆ ದೂಡಿರುವ ಈ ವರ್ತಮಾನವನ್ನು ಭೂತಕಾಲದ ಬದುಕಿನ ವಿಶ್ಲೇಷಣೆಯ ಮೂಲಕ ವಿಮರ್ಶೆಗೆ ಒಳಪಡಿಸುವುದು ಈ ಅಧ್ಯಯನದ ಗುರಿಯಾಗಿದೆ. ಇಂದಿನ ಜಾಗತೀಕರಣದ ಕಾರ್ಪೋರೇಟ್ ವಾತಾವರಣದಲ್ಲಿ ನಲುಗುತ್ತಿರುವ ಮಾನವೀಯ ಮೌಲ್ಯಗಳನ್ನು ಹುಡುಕುವ ಮತ್ತು ಆದರ್ಶ ಮೌಲ್ಯಗಳನ್ನು ಹುಟ್ಟುಹಾಕುವ ಬರಹಗಳನ್ನು ಪ್ರೋತ್ಸಾಹಿಸುವ ಕೆಲಸವೂ ಆಗಬೇಕಾಗಿದೆ.

ಆಧುನಿಕತೆಯ ನಾಗಾಲೋಟದಲ್ಲಿ ತೃತೀಯ ಜಗತ್ತಿನ ಅನೇಕ ಭಾಷೆಗಳು ಮತ್ತು ಸಂಸ್ಕೃತಿ ಆತಂಕದ ಪರಿಸ್ಥಿತಿಯನ್ನು ಎದುರಿಸುತ್ತಿರುವ ಈ ಸಂದರ್ಭದಲ್ಲಿ ಕನ್ನಡ ವಿಶ್ವವಿದ್ಯಾಲಯದ ಜವಾಬ್ದಾರಿ ಅತ್ಯಂತ ಹೆಚ್ಚಿನದಾಗಿದೆ. ಈ ಹಿನ್ನೆಲೆಯಲ್ಲಿ ಕನ್ನಡ ವಿಶ್ವವಿದ್ಯಾಲಯವು ಭಾಷೆ, ಸಾಹಿತ್ಯ, ಸಂಸ್ಕೃತಿ, ವಿಜ್ಞಾನ ಮತ್ತು ಸಮಾಜವಿಜ್ಞಾನ ಕ್ಷೇತ್ರಗಳಲ್ಲಿ ಕನ್ನಡವನ್ನು ಅಭಿವೃದ್ಧಿಯತ್ತ ಕೊಂಡೊಯ್ಯುವ ಯೋಜನೆಗಳನ್ನು ರೂಪಿಸುತ್ತಿದೆ, ಅದು ಸ್ವಾಗತಾರ್ಹ. ಕನ್ನಡ ವಿಶ್ವವಿದ್ಯಾಲಯದ ಉದ್ದೇಶಕ್ಕನುಗುಣವಾಗಿ ಜ್ಞಾನವನ್ನು ಕನ್ನಡದಲ್ಲಿ ಪಸರಿಸುವ ಈ ಕೈಂಕರ್ಯಕ್ಕೆ ಸಾರ್ವಜನಿಕರು, ಸರ್ಕಾರಗಳು ಬೆಂಬಲ ನೀಡಿದರೆ ಅನುಕೂಲವಾಗುತ್ತದೆ. ಈ ಎಲ್ಲಾ ಕ್ಷೇತ್ರಗಳಲ್ಲಿ ಅಧ್ಯಯನಶೀಲರಾದ ಯುವಜನತೆಗೆ ವಿಪುಲ ಅವಕಾಶಗಳಿವೆ ಎಂಬುದನ್ನು ಮನಗಾಣಬೇಕಾಗಿದೆ.

ವಿಜ್ಞಾನಿಗಳ ನಿರಂತರ ಶೋಧನೆಯ ಪರಿಣಾಮವಾಗಿ ಆಧುನಿಕ ತಂತ್ರಜ್ಞಾನದ ಬೆಳವಣಿಗೆಯಾಗಿದೆ. ವಿದ್ಯಾರ್ಥಿಗಳು ತಮ್ಮ ಕಲಿಕೆಗೆ ಇವುಗಳನ್ನು ಪೂರಕವಾಗಿ ಬಳಸಿಕೊಂಡಲ್ಲಿ ಬದುಕಿನ ನೆಲೆಗಳನ್ನು ಕಂಡುಕೊಳ್ಳುವುದು ನಿಶ್ಚಿತ. ಒಂಟಿಯಾಗಿ ಡಿಜಿಟಲ್ ಆಟಗಳ ಚಟ ಇತ್ಯಾದಿ ಅಪಾಯಗಳಿಗೆ ಬಲಿಯಾಗುವ ಬಗೆಗೂ ವಿದ್ಯಾರ್ಥಿ ಗಳು ಪ್ರಜ್ಞೆಯುಳ್ಳವರಾಗಿರಬೇಕು. ಆಧುನಿಕ ತಂತ್ರಜ್ಞಾನವೆಂಬುದು ವಿದ್ಯಾರ್ಥಿಗಳ ಕಲಿಕೆಗೆ ಪೂರಕವಾಗಿ ಬಳಕೆಯಾದಾಗ ಕನ್ನಡ ನೆಲದ ಬದುಕು ಹಸನಾಗಬಹುದು ಎಂದರು.

- **ಜಗತ್ತಿನ ಎಲ್ಲ ಜ್ಞಾನಶಾಖೆಗಳನ್ನು ಕನ್ನಡದಲ್ಲಿ ವಿವರಿಸುವ ಶಕ್ತಿಯನ್ನು ತುಂಬುವ ಮೂಲಕ ಕನ್ನಡ ಭಾಷೆಗೆ ಈ ಸ್ಪರ್ಧಾತ್ಮಕ ಜಗತ್ತಿನಲ್ಲಿ ಅರ್ಹ ಸ್ಥಾನವನ್ನು ಕಲ್ಪಿಸಿಕೊಡುವುದು ಇದರ ಮುಖ್ಯ ಉದ್ದೇಶ.**
- **ಕನ್ನಡ ಮತ್ತು ಕರ್ನಾಟಕಕ್ಕೆ ಸಂಬಂಧಿಸಿದಂತೆ ವಿವಿಧ ವಿಷಯಗಳ ಬಗೆಗೆ ಬಹುಶಿಸ್ತೀಯ ಮತ್ತು ಅಂತರ್‌ಶಿಸ್ತೀಯ ನೆಲೆಯ ಸಂಶೋಧನೆಗಳನ್ನು ಆಯೋಜಿ ಸುವುದು ಈ ವಿಶ್ವವಿದ್ಯಾಲಯದ ಮೂಲ ಆಶಯ.**
- **ತಳಸ್ತರದ ಜ್ಞಾನಶೋಧನೆ, ದೇಸಿ ಪರಂಪರೆಗಳ ವ್ಯಾಖ್ಯಾನ, ದುಡಿಯುವ ವರ್ಗಗಳೆನಿಸಿದ ರೈತರು, ಕಾರ್ಮಿಕರು, ಕುಶಲಕರ್ಮಿಗಳು, ಕೃಷಿ ಕೂಲಿಕಾರರು, ಬುಡಕಟ್ಟು ಮತ್ತು ಅಲೆಮಾರಿ ಮುಂತಾದ ಅಲಕ್ಷಿತರ ಸಮಕಾಲೀನ ಕಥನಗಳು ಇಲ್ಲಿನ ಆದ್ಯತೆ.**
- **ಬುದ್ಧ, ಬಸವ, ಗಾಂಧಿ, ಅಂಬೇಡ್ಕರ್, ಲೋಹಿಯಾ ಮತ್ತು ಕುವೆಂಪು ಮುಂತಾದ ದಾರ್ಶನಿಕರು ಈ ಚಿಂತನೆಗಳ ಹಿಂದಿನ ಬೆಳಕು.**
- **ಕನ್ನಡ ವಿ.ವಿ. ಸಂಶೋಧನೆಗಳು ವಿದ್ಯಾರ್ಥಿಗಳಿಗೆ, ವಿದ್ವಾಂಸರಿಗೆ, ಸಂಶೋಧನಾ ಸಕ್ತರಿಗೆ, ಸಮಾಜದ ಸಾಮಾನ್ಯ ಜನರಿಗೆ ನೆರವಾಗುತ್ತಿವೆ.**

## ಭಾಷೆ ಏಳ್ಗೆಯಲ್ಲಿ ಅಮೋಘ ಸಾಧನೆ

**ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ.ಸುಧಾಕರ್ ಹೇಳಿಕೆ**



ಕನ್ನಡ ವಿಶ್ವವಿದ್ಯಾಲಯದ ಧ್ಯೇಯವಾಕ್ಯವೇ, "ಕನ್ನಡ ವಿಶ್ವವಿದ್ಯಾಲಯ ವಿದ್ಯೆಯನ್ನು ಕಲಿಯಲು ಅನುವು ಮಾಡಿಕೊಡುವ ಒಂದು ಸಂಸ್ಥೆಯೇ ಹೊರತು, ಅದು ವಿದ್ಯೆಯನ್ನು ಕಲಿಸುವ ಸಂಸ್ಥೆಯಲ್ಲ. ಒಂದು ದೃಷ್ಟಿಯಿಂದ ಇದು ವಿದ್ಯೆಯನ್ನು ನಿರ್ಮಿಸುವ ಸಂಸ್ಥೆಯಾಗಿದೆ." ಪದವಿ ಅಥವಾ ಶಿಕ್ಷಣ ನೀಡುವುದೇ ಕನ್ನಡ ವಿಶ್ವವಿದ್ಯಾಲಯ ಪರಮಗುರಿ ಅಲ್ಲ, ಕನ್ನಡ ಭಾಷೆಯ ಸರ್ವತೋಮುಖ ಏಳಿಗೆಯನ್ನು ಸಾಧಿಸುವುದು ವಿಶ್ವವಿದ್ಯಾಲಯದ ಮುಖ್ಯ ಉದ್ದೇಶ. ಈ ಗುರಿ ಸಾಧನೆಗಾಗಿ ಸಂಶೋಧನಾಂಗ, ಪ್ರಸಾರಾಂಗ, ಆಡಳಿತಾಂಗ ಎಂಬ ಸಂರಚನೆಯನ್ನು ಮಾಡಿಕೊಂಡು ಹಲವು ಎತ್ತರಗಳನ್ನು ವಿಶ್ವವಿದ್ಯಾಲಯ ಏರಿದೆ. ಅಮೋಘ ಸಾಧನೆ ಮಾಡಿದ ಹೆಮ್ಮೆಯ ವಿಶ್ವವಿದ್ಯಾಲಯವು ಅನುದಾನದ ಕೊರತೆಯಿಂದ ತನ್ನ ಸಂಶೋಧನೆ ಅಭಿವೃದ್ಧಿ ಹಾಗೂ ನಿರ್ವಹಣೆ ಚಟುವಟಿಕೆಗಳಲ್ಲಿ ಸಂಕಷ್ಟಗಳನ್ನು ಎದುರಿಸುತ್ತಿರುವುದನ್ನು ಕೇಳಿದ್ದೇನೆ. ಸ್ವತಃ ಕುಲಪತಿಗಳಾದ ಡಾ.ಡಿ.ವಿ. ಪರಮಶಿವಮೂರ್ತಿಯವರು ಆರ್ಥಿಕ ಸಂಕಷ್ಟಗಳಿಂದಾಗಿ ಉದ್ಭವಿಸಿರುವ ಇಲ್ಲಿನ ಪರಿಣಾಮಗಳನ್ನು ನನ್ನೊಂದಿಗೆ ಹಂಚಿಕೊಂಡಿದ್ದಾರೆ. ಮುಖ್ಯಮಂತ್ರಿಗಳೊಂದಿಗೆ ಇಲ್ಲಿನ ಎಲ್ಲ ಆರ್ಥಿಕ ಸಂಕಷ್ಟಗಳ ಕುರಿತು ಮಾತನಾಡಿ, ಆದಷ್ಟು ಬೇಗ ಪರಿಹಾರಗಳನ್ನು ಹುಡುಕಿ, ಕನ್ನಡ ವಿಶ್ವವಿದ್ಯಾಲಯದ ಶೈಕ್ಷಣಿಕ ಚಟುವಟಿಕೆಗಳು, ಅಭಿವೃದ್ಧಿ ಕಾರ್ಯಗಳು ಮತ್ತಷ್ಟು ಹೊಸ ಹುರುಪು ಹಾಗೂ ಹೊಳಪಿನೊಂದಿಗೆ ನಡೆಯಲು ಬೇಕಾದ ವಾತಾವರಣದ ಸೃಷ್ಟಿಗೆ ಪ್ರಾಮಾಣಿಕ ವಾಗಿ ಪ್ರಯತ್ನಿಸುತ್ತೇನೆ. ಸ್ವತಃ ಮುಖ್ಯಮಂತ್ರಿಗಳು ಇತ್ತೀಚೆಗೆ ಕರ್ನಾಟಕದಲ್ಲಿ ಶೇ.60ರಷ್ಟು ವಾಣಿಜ್ಯ ಫಲಕಗಳು ಕನ್ನಡದಲ್ಲಿರಬೇಕು ಎನ್ನುವ ತೀವ್ರ ಕಳಕಳಿ ವ್ಯಕ್ತಪಡಿಸಿದ್ದಾರೆ. ಹಾಗಾಗಿ ಕನ್ನಡ ವಿಶ್ವವಿದ್ಯಾಲಯದ ಆರ್ಥಿಕ ಸಂಕಷ್ಟಗಳನ್ನು ಮುಖ್ಯಮಂತ್ರಿಗಳು ಸಹಾನುಭೂತಿಯಿಂದ ಪರಿಹರಿಸಬಲ್ಲರು ಎನ್ನುವ ನಂಬಿಕೆ ನನ್ನದು ಎಂದರು.

ಮೈಕ್ರೋ ನ್ಯೂಸ್

## ಜ.12ಕ್ಕೆ ರಾಷ್ಟ್ರೀಯಯುವ ದಿನಾಚರಣೆ ಕಾರ್ಯಕ್ರಮ

**ಹಂಪಿ ಟೈಮ್ಸ್ ಹೊಸಪೇಟೆ**
ನಗರದ ತಾಲ್ಲೂಕು ಕಾನೂನು ಸೇವಾ ಸಮಿತಿ, ವಕೀಲರ ಸಂಘ ಹಾಗೂ ಶ್ರೀ ಗುರು ಪಿ.ಯು. ಕಾಲೇಜ್ ಇವರ ಸಂಯುಕ್ತಾಶ್ರಯದಲ್ಲಿ ರಾಷ್ಟ್ರೀಯ ಯುವ ದಿನಾಚರಣೆ ಕಾರ್ಯಕ್ರಮವನ್ನು ಜನವರಿ 12ರಂದು ಬೆಳಿಗ್ಗೆ 9.30 ಗಂಟೆಗೆ ನಗರದ ಶ್ರೀ ಗುರು ಪಿ.ಯು ಕಾಲೇಜಿನಲ್ಲಿ ಹಮ್ಮಿಕೊಳ್ಳಲಾಗಿದೆ.

ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರಾದ ಅಬ್ದುಲ್ ರಹೀಮಾನ್ ಎ ನಂದಗಡಿ ಕಾರ್ಯಕ್ರಮ ಉದ್ಘಾಟಿಸುವರು. ಶ್ರೀ ಗುರು ಪಿ.ಯು ಕಾಲೇಜಿನ ಪ್ರಾಚಾರ್ಯರಾದ ವಿನೋದ್‌ಕುಮಾರ್ ಅಧ್ಯಕ್ಷತೆ ವಹಿಸುವರು. ಮುಖ್ಯ ಅತಿಥಿಗಳಾಗಿ ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ತಾಲ್ಲೂಕು ಕಾನೂನು ಸೇವಾ ಸಮಿತಿ ಅಧ್ಯಕ್ಷರಾದ ಹೇಮಲತಾ ಬಿ. ಹುಲ್ಲೂರ, ಅಪರ ಹಿರಿಯ ಸಿವಿಲ್ ನ್ಯಾಯಾಧೀಶರಾದ ರಮೇಶ ಬಾಬು ಬಿ.ಎನ್., ಪ್ರಧಾನ ಸಿವಿಲ್ ನ್ಯಾಯಾಧೀಶರು ಹಾಗೂ ತಾಲ್ಲೂಕು ಕಾನೂನು ಸೇವಾ ಸಮಿತಿಯ ಸದಸ್ಯ ಕಾರ್ಯದರ್ಶಿಗಳಾದ ಕಿಶನ್ ಬಿ.ಮಾಡಲಗಿ, ಅಪರ ಸಿವಿಲ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಧೀಶರಾದ ತೃಪ್ತಿ ಧರಣಿ, 3ನೇ ಅಪರ ಸಿವಿಲ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಧೀಶರಾದ ಚೈತ್ರಜೆ., ಡಿ.ಡಿ.ಪಿ.ಓ ನಾಗರಾಜ್ ಹವಲ್ದಾರ್, ಗ್ರಾಮೀಣ ಪೊಲೀಸ್ ಠಾಣೆಯ ವೃತ್ತ ನಿರೀಕ್ಷಕರಾದ ದೀಪಕ್ ಬೋಸ್‌ರೆಡ್ಡಿ, ವಕೀಲರ ಸಂಘದ ಅಧ್ಯಕ್ಷರಾದ ಕೆ.ಪ್ರಹ್ಲಾದ್, ವಕೀಲರ ಸಂಘದ ಪ್ರಧಾನ ಕಾರ್ಯದರ್ಶಿಗಳಾದ ಪಿ.ಶ್ರೀನಿವಾಸ ಮೂರ್ತಿ ಭಾಗವಹಿಸುವರು. ಸಂಪನ್ಮೂಲ ವ್ಯಕ್ತಿಗಳಾಗಿ ಹಿರಿಯ ವಕೀಲರಾದ ಕೆ.ಜಂಬಣ್ಣ ಪಾಲ್ಗೊಳ್ಳಲಿದ್ದಾರೆ ಎಂದು ಹೊಸಪೇಟೆ ತಾಲ್ಲೂಕು ಕಾನೂನು ಸೇವಾ ಸಮಿತಿ ತಿಳಿಸಿದೆ.

## ಸಹಾಯಧನಕ್ಕಾಗಿ ಅರ್ಜಿ ಆಹ್ವಾನ

**ಹಂಪಿ ಟೈಮ್ಸ್ ಬಳ್ಳಾರಿ**
ಕೃಷಿ ಇಲಾಖೆ ವತಿಯಿಂದ ಕೃಷಿ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಹೊಸ ಉದ್ಯೋಗ ಪ್ರಾರಂಭಿಸಲು ಮತ್ತು ಇರುವ ಉದ್ಯಮಗಳ ವಿಸ್ತರಣೆಗೆ ಸಹಾಯಧನ ಪಡೆಯಲು ಆಸಕ್ತರಿಂದ ಅರ್ಜಿ ಆಹ್ವಾನಿಸಲಾಗಿದೆ ಎಂದು ಜಂಟಿ ಕೃಷಿ ನಿರ್ದೇಶಕ ಕೆ.ಮಲ್ಲಿಕಾರ್ಜುನ ಅವರು ತಿಳಿಸಿದ್ದಾರೆ.

ರಾಜ್ಯ ಸರ್ಕಾರವು ಕೃಷಿ ಕ್ಷೇತ್ರದಲ್ಲಿ ಉದ್ಯಮಶೀಲತೆ ಹೆಚ್ಚಿಸಲು ಯುವಕರಿಗೆ ಉದ್ಯೋಗ ಸೃಜನೆಗಾಗಿ "ಕೃಷಿ ನವೋದ್ಯಮ" ಯೋಜನೆಯನ್ನು ಜಾರಿಗೆ ತಂದಿದ್ದು, ಇದರ ಸದುಪಯೋಗಪಡೆದುಕೊಳ್ಳಬೇಕು.

ಆಸಕ್ತ ಉದ್ಯಮದಾರರು ಒಂದು ವಾರದೊಳಗೆ ತಾಲೂಕಿನ ಕೃಷಿ ನಿರ್ದೇಶಕರ ಕಚೇರಿಗೆ ಅರ್ಜಿ ಸಲ್ಲಿಸಬೇಕು.

ಕೃಷಿ ಇಲಾಖೆಯಿಂದ ಪರಿಶೀಲನೆ ನಡೆಸಿ ನವೋದ್ಯಮಕ್ಕೆ ಶೇ.50 ರಷ್ಟು ಕನಿಷ್ಠ 5 ಲಕ್ಷದಿಂದ 20 ಲಕ್ಷದವರೆಗೆ ಹಾಗೂ ಹಾಗು ಈಗಾಗಲೇ ಸ್ಥಾಪಿಸಿರುವ ಕೃಷಿ ನವೋದ್ಯಮಗಳ ವಿಸ್ತರಣೆಗೆ 20 ಲಕ್ಷದಿಂದ 50 ಲಕ್ಷದವರೆಗೆ ಖಜಾನೆ–2 ಮೂಲಕ ಸಹಾಯಧನ ನೀಡಲಾಗುತ್ತದೆ. ಆಯ್ಕೆಯಾದ ಕೃಷಿ ನವೋದ್ಯಮಗಳಿಗೆ ವಿವಿಧ ತರಬೇತಿ ಕೇಂದ್ರಗಳಲ್ಲಿ ತರಬೇತಿ ನೀಡಲಾಗುತ್ತದೆ. ಹೆಚ್ಚಿನ ಮಾಹಿತಿಗಾಗಿ ರೈತ ಸಂಪರ್ಕ ಕೇಂದ್ರ ಅಥವಾ ಸಹಾಯಕ ಕೃಷಿ ನಿರ್ದೇಶಕರ ಕಚೇರಿಯನ್ನು ಸಂಪರ್ಕಿಸ ಬಹುದು ಎಂದು ತಿಳಿಸಿದ್ದಾರೆ.

## ಮದರಸಾಗಳಿಗೆ ಶಿಕ್ಷಣ ನೀಡಲು ಅರ್ಜಿ ಆಹ್ವಾನ

**ಹಂಪಿ ಟೈಮ್ಸ್ ಹೊಸಪೇಟೆ**
ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯಿಂದ 2023–24ನೇ ಸಾಲಿನಲ್ಲಿ ರಾಜ್ಯದಲ್ಲಿ ನೋಂದಾಯಿತ ಮದರಸಾಗಳಿಗೆ ಔಪಚಾರಿಕ ಮತ್ತು ಗಣಕೀಕೃತ ಶಿಕ್ಷಣವನ್ನು ನೀಡಲು ಆಸಕ್ತ ಮದರಸಾಗಳಿಂದ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ.

ಮದರಸಾಗಳು ರಾಜ್ಯದಲ್ಲಿ ವಕ್ಫ್ ಅಥವಾ ಇತರೆ ಸಂಘ ಸಂಸ್ಥೆ ಕಾಯ್ದೆಯಡಿ ನೋಂದಾಯಿಸಿರಬೇಕು. ಮದರಸಾದಲ್ಲಿ 40 ಅರ್ಹ ವಿದ್ಯಾರ್ಥಿಗಳಿರಬೇಕು. ಮದರಸಾಗಳು ತರಗತಿ ಅಥವಾ ಕೊಠಡಿಗಳೊಂದಿಗೆ ವಸತಿ ಸೌಲಭ್ಯವನ್ನು ಹೊಂದಿರಬೇಕು. ಆಸಕ್ತ ಮದರಸಾ ಸಂಸ್ಥೆಯವರು ವೆಬ್ಸೈಟ್ https://dom.karnataka.gov.in ಮೂಲಕ ಅರ್ಜಿ ಸಲ್ಲಿಸಿ, ಅರ್ಜಿಯೊಂದಿಗೆ ಎಲ್ಲಾ ದಾಖಲೆಗಳೊಂದಿಗೆ ಹೊಸಪೇಟೆ ನಗರದ ಎಸ್.ಎಂ.ಎಸ್.ಕೆ ಪ್ಲಾಜಗುಗ್ರೀ ನರ್ಸಿಂಗ್ ಹೋಮ್ ಪಕ್ಕದಲ್ಲಿ ಅಂಬೇಡ್ಕರ್ ಸರ್ಕಲ್ ಹತ್ತಿರದ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಜಿಲ್ಲಾ ಅಧಿಕಾರಿಗಳ ಕಚೇರಿಗೆ ಜನವರಿ 20ರೊಳಗಾಗಿ ಸಲ್ಲಿಸಬಹುದಾಗಿದೆ.

# ರೈತರಿಂದ ಜೆಸ್ಕಾಂಗೆ ಮುತ್ತಿಗೆ

### ವಿದ್ಯುತ್ ಇಲಾಖೆಯ ಸಮಸ್ಯೆಗಳ ಪರಿಹಾರಕ್ಕೆ ಒತ್ತಾಯ | ಅಧಿಕಾರಿಗಳಿಂದ ಭರವಸೆ



**ಹಂಪಿ ಟೈಮ್ಸ್ ಹಗರಿಬೊಮ್ಮನಹಳ್ಳಿ**
ತಾಲೂಕಿನೆಲ್ಲೆಡೆ ವಿದ್ಯುತ್ ಇಲಾಖೆಯಿಂದ ತಲೆ ದೋರಿರುವ ನಾನಾ ರೀತಿಯ ಸಮಸ್ಯೆಗಳಿಗೆ, ಪರಿಹಾರ ನೀಡುವಂತೆ ಒತ್ತಾಯಿಸಿ ಕರ್ನಾಟಕ ರಾಜ್ಯ ರೈತಸಂಘದಿಂದ ಜೆಸ್ಕಾಂ ಇಲಾಖೆಗೆ ಮುತ್ತಿಗೆ ಹಾಕಿ ಪ್ರತಿಭಟನೆ ಮಾಡಿದ ಘಟನೆ ಬುಧವಾರ ಜರುಗಿತು.

ಜೆಸ್ಕಾಂನ ಕಾರ್ಯನಿರ್ವಾಹಕ ಅಭಿಯಂತರರ ಕಚೇರಿಗೆ ಮುತ್ತಿಗೆ ಹಾಕುವುದಾಗಿ ಮೊದಲೇ ಮಾಹಿತಿ ನೀಡಿದ ಹಿನ್ನೆಲೆಯಲ್ಲಿ, ಬಹುತೇಕ ಸಿಪಿಐ ಸೇರಿದಂತೆ ಪೋಲೀಸ್ ಬಂದೋಬಸ್ತ್ ಬಿಗಿಪಟ್ಟಾಗಿತ್ತು. ಇಲ್ಲಿಯ ಈಶ್ವರ ದೇಗುಲದಿಂದ ಆರಂಭವಾದ ಪ್ರತಿಭಟನೆಯು ದಾರಿಯುದ್ದಕ್ಕೂ ಸರ್ಕಾರ ಹಾಗೂ ವಿದ್ಯುತ್ ಇಲಾಖೆಯ ವಿರುದ್ಧ ಘೋಷಣೆಗಳನ್ನು ಕೂಗುತ್ತ ಕಚೇರಿ ತಲುಪಿದರು. ಪೊಲೀಸ್ ಅಧಿಕಾರಿಗಳು ಗೇಟ್‌ನಲ್ಲಿಯೇ ತಡೆದು ಒಂದು ಕಡೆ ಕುಳಿತು ಪ್ರತಿಭಟನೆಗೆ ಅವಕಾಶ ನೀಡುತ್ತೇವೆ ಎಂದು ಕೇಳಿಕೊಂಡಾಗ, ರೈತ ಸಂಘದವರು ನಮ್ಮ ಪ್ರತಿಭಟನೆಗೆ ಅಧಿಕಾರಿಗಳು ಸ್ಪಧಿಸುವುದಾದರೆ ನಾವು ಶಾಂತವಾಗಿಯೇ ಪ್ರತಿಭಟಿಸುತ್ತೇವೆ. ಇಲ್ಲವಾದರೆ ಅನಿವಾರ್ಯವಾಗಿ ಕಚೇರಿಗೆ ಬೀಗಹಾಕಿ ಪ್ರತಿಭಟಿಸುತ್ತೇವೆ ಎಂದು ಎಚ್ಚರಿಸಿದರು.

ಆವರಣದೊಳಗೆ ಕುಳಿತ ಪ್ರತಿಭಟನೆಯನ್ನುದ್ದೇಶಿಸಿ ಉತ್ತರ ಕರ್ನಾಟಕ ಕಾರ್ಯದರ್ಶಿಯಾದ ಬಿ.ಗೋಣೆಬಸಪ್ಪ ಮಾತನಾಡಿ, ಜೆಸ್ಕಾಂ ಇಲಾಖೆಯ ನಿರ್ಲಕ್ಷ್ಯದಿಂದ ರೈತರು ಆತ್ಮಹತ್ಯೆಯಂತ ಪ್ರಕರಣಗಳಲ್ಲಿ ಸಿಲುಕುತ್ತಾರೆ. ನಮ್ಮ ಬೇಡಿಕೆಗಳಾದ ತೆಲುಗೋಳಿ ಮತ್ತು ಜಿ. ಕೋಡಿಹಳ್ಳಿ ಗ್ರಾಮಗಳಲ್ಲಿ ಸ್ಥಾಪನೆಯಾಗಬೇಕಾದ 66/11ಕೆ.ವಿ.ವಿದ್ಯುತ್ ಉಪಕೇಂದ್ರ ಕಾಮಗಾರಿ ಕೂಡಲೆ ಆರಂಭಿಸಬೇಕು. ಈ ಹಿಂದೇ ಮಂಜೂರಾದ ಕಾಮಗಾರಿಗಳಿಗೆ ಪರಿವರ್ತಕಗಳನ್ನು ಒದಗಿಸಿಕೊಡಬೇಕು, ನೆನೆಗುದಿಗೆ ಬಿದ್ದಿರುವ ಅಕ್ರಮ ಸಕ್ರಮ ಯೋಜನೆಗೆ ಪರಿವರ್ತಕಗಳನ್ನು ನೀಡಬೇಕು, ಯೋಜನೆ ಕೂಡಲೆ ಕೈಗೆತ್ತಿಕೊಳ್ಳಬೇಕು. ರೈತರಿಗೆ ನೀಡುತ್ತಿರುವ ಕಿರುಕುಳಗಳು ತಪ್ಪಬೇಕು ಎಂದು ಒತ್ತಾಯಿಸಿದರು.

ರೈತ ಸಂಘದ ಕಾರ್ಯದರ್ಶಿ ರವಿ ತಂಬ್ರಹಳ್ಳಿ, ಮಾಬುಸಾಬ್, ಕರವೇ ಅಧ್ಯಕ್ಷ ಎನ್.ಎಂ. ಗೌಸ್, ಬಾಣದ ಶಿವಪ್ಪ, ಏಣಿಗಿ ಕರಿಯಪ್ಪ, ಒಪ್ಪತೇಶ, ಎಚ್.ಮಹೇಶ ಸೇರಿದಂತೆ ಅನೇಕರು ಮಾತನಾಡಿದರು.

ಸ್ಥಳಕ್ಕೆ ಆಗಮಿಸಿದ ಅಧಿಕಾರಿಗಳು ಜೆಸ್ಕಾಂನ ಬಳ್ಳಾರಿಯ ಮುಖ್ಯ ಅಧಿಕ್ಷಕರು ಚೌವ್ಹಾಣ್, ಹೊಸಪೇಟೆಯ ಕೆಪಿಟಿಸಿಎಲ್‌ನ ಇಇ ಶ್ರೀನಿವಾಸ, ಇಲ್ಲಿಯ ಪ್ರಭಾರಿ ಇಇ ತೇಜಾನಾಯ್ಕ್, ಬಳ್ಳಾರಿ ಸಿಇ ಚೌವ್ಹಾಣ್ ಮಾತನಾಡಿ, ನಿಮ್ಮ ಬೇಡಿಕೆಗಳನ್ನು ಗಮಸಿದ್ದೇವೆ, ಶೀಘ್ರದಲ್ಲೇ ಪರಿಹರಿಸಲು ಪ್ರಮಾಣಿಕ ಪ್ರಯತ್ನಿಸುತ್ತೇವೆ ಎಂದರು. ಲಿಖಿತವಾಗಿ ಕೊಡಬೇಕು ಎಂದು ರೈತರು ಪಟ್ಟು ಹಿಸಿದ ಹಿನ್ನೆಲೆಯಲ್ಲಿ ಲಿಖಿತವಾಗಿ ಭರವಸೆ ನೀಡಿದ ಅಧಿಕಾರಿಗಳ ಮೇಲೆ ವಿಶ್ವಾಸದಿಂದ, ಪ್ರತಿಭಟನೆ ಸ್ಥಳದಲ್ಲಿ ಅಡುಗೆ ಮಾಡಿದ್ದ ರೈತರು ಊಟವಾದ ಬಳಿಕ ಪ್ರತಿಭಟನೆ ಹಿಂಪಡೆದರು.

ಈ ವೇಳೆ ತಾಲೂಕು ಅಧ್ಯಕ್ಷ ಹರಟೆ ಕಾಳಪ್ಪ, ಪಂಪಾಪತಿ, ಎಂ.ಬಸಪ್ಪ, ಬಿ.ಮಲ್ಲಿಕಾರ್ಜುನ, ಎಚ್.ರುದ್ರಗೌಡ, ಎಚ್.ಶೇಖರಪ್ಪ, ಕೆ.ಕೆ,ಬಿ. ಎಂ.ಗುರುರಾಜ್, ಕುರಿನಾಗೇಂದ್ರ, ಕಿನ್ನಾಳ್ ಸುರೇಶ್ ಸೇರಿದಂತೆ ಅನೇಕರಿದ್ದರು.

"ಹಗಲು ಹೊತ್ತಿನಲ್ಲಿ 7ಗಂಟೆ ವಿದ್ಯುತ್ ನೀಡಬೇಕು, ಇದರಿಂದ ವಿಷಜಂತುಗಳಿಂದ ರೈತರ ಜೀವ ಉಳಿಯುತ್ತೆ. ಹಳೇ ತಂತಿಗಳನ್ನು ತೆಗೆಯಬೇಕು, ಹತ್ತಾರು ನಾಲ್ಕಾರು ಪರಿವರ್ತಕಗಳಿಗೆ ಒಂದೇ ಡಿವೆಲ್ ಹಾಕುವುದರಿಂದ ತೊಂದರೆಯಾಗುತ್ತೆಂಬಿತ್ತಾದಿ ಬೇಡಿಕೆ ಈಡೇರಿಸಬೇಕು ಇಲ್ಲವಾದರೆ ಕಚೇರಿಯ ಮುಂದೆ ಧರಣಿ ನಿರಂತರವಾಗುತ್ತೆ."– ಸಿದ್ದನಗೌಡ, ಜಿಲ್ಲಾಧ್ಯಕ್ಷ, ರೈತಸಂಘ.

ಹಗರಿಬೊಮ್ಮನಹಳ್ಳಿ ಪಟ್ಟಣದ ಜೆಸ್ಕಾಂ ಇಲಾಖೆ ಎಎ ಕಚೇರಿಗೆ, ರಾಜ್ಯರೈತ ಸಂಘದವರು ತಾಲೂಕಿನ ವಿದ್ಯುತ್ ಸಮಸ್ಯೆಗಳ ಬೇಡಿಕೆಯನ್ನಿಟ್ಟು ಪ್ರತಿಭಟಿಸಿ, ಇಲಾಖೆಯ ಸಿಇ ಅಧಿಕಾರಿಗೆ ಮನವಿ ಸಲ್ಲಿಸಿದರು.

# ಕೆ.ಪಿ.ಎಮ್.ಇ ನೋಂದಾಯಿಸದೇ ಆಸ್ಪತ್ರೆ ಆರಂಭಿಸಿದರೆ ದಂಡ

### ಜಿಲ್ಲಾ ಆರೋಗ್ಯ ಇಲಾಕಾಧಿಕಾರಿ ಡಾ.ವೈ.ರಮೇಶ್ ಬಾಬು ಹೇಳಿಕೆ

**ಹಂಪಿ ಟೈಮ್ಸ್ ಬಳ್ಳಾರಿ**
ಜಿಲ್ಲೆಯಲ್ಲಿ ವೈದ್ಯಕೀಯ ವಿದ್ಯಾರ್ಹತೆಯನ್ನು ಪೂರ್ಣಗೊಳಿಸಿರುವ ವೈದ್ಯರು ಕೆ.ಪಿ.ಎಮ್.ಇ ಕಾಯ್ದೆ ಅಡಿಯಲ್ಲಿ ನೋಂದಾಯಿಸಿಕೊಂಡು ಕ್ಲಿನಿಕ್, ಪಾಲಿ ಕ್ಲಿನಿಕ್, ನರ್ಸಿಂಗ್ ಹೋಮ್ ಅಥವಾ ಆಸ್ಪತ್ರೆಗಳು ಮತ್ತು ಪ್ರಯೋಗಾಲಯಗಳನ್ನು ಆರಂಭಿಸಬೇಕು. ಇಲ್ಲದಿದ್ದಲ್ಲಿ ದಂಡ ವಿಧಿಸಲಾಗುವುದು ಎಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ವೈ.ರಮೇಶ್ ಬಾಬು ಅವರು ತಿಳಿಸಿದ್ದಾರೆ.

ಈ ಕುರಿತು ಪ್ರಕಟಣೆ ಹೊರಡಿಸಿರುವ ಅವರು, ಕರ್ನಾಟಕ ಖಾಸಗಿ ವೈದ್ಯಕೀಯ ಸಂಸ್ಥೆಗಳ ಅಧಿನಿಯಮ ಕಾಯ್ದೆ 2007 ಮತ್ತು 2009 ರ ನಿಯಮಗಳು ಹಾಗೂ ಕಾಲ ಕಾಲಕ್ಕೆ ಆದ ತಿದ್ದುಪಡಿ ಅನುಸಾರ ಅಂಗೀಕೃತ ವೈದ್ಯಕೀಯ ವಿದ್ಯಾರ್ಹತೆಯನ್ನು ಪೂರ್ಣಗೊಳಿಸಿರುವ ವೈದ್ಯರು ಕಡ್ಡಾಯವಾಗಿ ಕೆ.ಪಿ.ಎಮ್.ಇ ಕಾಯ್ದೆಯ ಅಧ್ಯಕ್ಷರು ಹಾಗೂ ಜಿಲ್ಲಾಧಿಕಾರಿಗಳಿಂದ ಕೆ.ಪಿ.ಎಮ್.ಇ ಕಾಯ್ದೆಯಡಿ ನೋಂದಣಿ ಪ್ರಮಾಣ ಪತ್ರವನ್ನು ಪಡೆದ ನಂತರವೇ ಕ್ಲಿನಿಕ್, ಪಾಲಿ ಕ್ಲಿನಿಕ್, ನರ್ಸಿಂಗ್ ಹೋಮ್ ಅಥವಾ ಆಸ್ಪತ್ರೆಗಳು ಮತ್ತು ಪ್ರಯೋಗಾಲಯಗಳನ್ನು



ಆರಂಭಿಸುವುದು ಕಡ್ಡಾಯವಾಗಿರುತ್ತದೆ. ಒಂದು ವೇಳೆ ನಿರ್ಲಕ್ಷಿಸಿ ಅನುಮತಿ ಪಡೆಯದೇ ಆರಂಭಿಸಿದರೆ ಕೆ.ಪಿ.ಎಮ್.ಇ ಕಾಯ್ದೆ ಉಲ್ಲಂಘನೆ ಎಂದು ಪರಿಗಣಿಸಿ ಸಂಬಂಧಪಟ್ಟವರ ವಿರುದ್ಧ ಕೆ.ಪಿ.ಎಮ್.ಇ ಕಾಯ್ದೆ ಕಲಂ 19, 20, 21 ಹಾಗೂ 22 ರ ಅನುಸಾರ ದಂಡ ವಿಧಿಸಲಾಗುವುದೆಂದು ತಿಳಿಸಿದ್ದಾರೆ.

ಜಿಲ್ಲೆಯಲ್ಲಿ ಅನುಮತಿ ಪಡೆಯದೇ ಖಾಸಗಿ ಕೇಂದ್ರಗಳನ್ನು ತೆರೆದಿರುವ ಒಂದು ಆಸ್ಪತ್ರೆ, ಎರಡು ಪಾಲಿ ಕ್ಲಿನಿಕ್, ಒಂದು ಪ್ರಯೋಗಾಲಯ ಹಾಗೂ ಒಂದು ಕ್ಲಿನಿಕ್ ವಿರುದ್ಧ ಸಿರುಗುಪ್ಪ ತಾಲ್ಲೂಕಿನಲ್ಲಿ ತಲಾ ರೂ.50,000/– ರಂತೆ ಒಟ್ಟು ರೂ.2,50,000/– ದಂಡವನ್ನು ವಿಧಿಸಲಾಗಿದೆ ಎಂದು ಹೇಳಿದ್ದಾರೆ.

ನಕಲಿ ವೈದ್ಯ ವಿರುದ್ಧ ಎಫ್‌ಐಆರ್ ದಾಖಲು : ಜಿಲ್ಲೆಯಲ್ಲಿ ಅಧೀಕೃತ ವೈದ್ಯಕೀಯ ಪದವಿ ಇಲ್ಲದೇ ವೈದ್ಯ ವೃತ್ತಿ ಮಾಡುವವರಿಗೆ ಕೆ.ಪಿ.ಎಮ್.ಇ ಕಾಯ್ದೆ ಅನುಸಾರ ಎಫ್.ಐ.ಆರ್ ದಾಖಲು ಮಾಡಲಾಗುತ್ತಿದೆ. ಈಗಾಗಲೇ ಬಳ್ಳಾರಿ ತಾಲ್ಲೂಕಿನ ಕೊರ್ಲಗುಂದಿ ಗ್ರಾಮ, ಬಳ್ಳಾರಿ ನಗರದ ಬೆಳಗಲ್ ಕ್ರಾಸ್ ಮತ್ತು ಮಿಲ್ಲರ್‌ಪೇಟೆಯಲ್ಲಿ ಯಾವುದೇ ವೈದ್ಯಕೀಯ ವಿದ್ಯಾರ್ಹತೆ ಇಲ್ಲದೇ ವೈದ್ಯ ವೃತ್ತಿ ನಡೆಸುತ್ತಿದ್ದ ಮೂವರು ನಕಲಿ ವೈದ್ಯರ ವಿರುದ್ದ ಎಫ್‌ಐಆರ್ ದಾಖಲಿಸಿ ತಲಾ ರೂ.50,000/– ರಂತೆ ಒಟ್ಟು ರೂ.1,50,000/– ದಂಡವನ್ನು ವಿಧಿಸಲಾಗಿದೆ.

ಬಾಡಿಗೆ ನೀಡುವಾಗ ಮಳಿಗೆ/ ಮನೆ ಮಾಲಿಕರು ವಹಿಸಬೇಕಾದ ಮುಂಜಾಗ್ರತೆ: ಯಾವುದೇ ಮನೆ ಅಥವಾ ಮಳಿಗೆಗಳನ್ನು ಆಸ್ಪತ್ರೆ, ಕ್ಲಿನಿಕ್ ಹಾಗೂ ಪ್ರಯೋಗಾಲಯ ಮುಂತಾದವುಗಳಿಗೆ ಬಾಡಿಗೆ ಕೊಡುವ ಮುನ್ನ ಸಂಬಂಧಪಟ್ಟ ಮನೆ ಹಾಗೂ ಕಟ್ಟಡದ ಮಾಲೀಕರು ವೈದ್ಯರ ಅಧಿಕೃತ ವೈದ್ಯಕೀಯ ಪ್ರಮಾಣವನ್ನು ಪರಿಶೀಲಿಸಿ ನಂತರ ಬಾಡಿಗೆ ಕೊಡಬೇಕು ಎಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ವೈ.ರಮೇಶ್ ಬಾಬು ತಿಳಿಸಿದ್ದಾರೆ.



## ಕನ್ನಡ ವಿವಿ 32ನೇ ನುಡಿಹಬ್ಬದ ಪಿಎಚ್‌ಡಿ ಪ್ರದಾನ ಚಿತ್ರಾವಳಿ













Printed by: MANJUNATHA .H .B Published by: A. SHUBHA. Owned by: A. SHUBHA and Printed at : AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at : At Ward No.15, Near Bannimahankali Temple, 3rd Cross, New Amaravathi, Hospet - 583201, Vijayanagara Dist., Karnataka. Editor : BASAPUR BASAVARAJA